ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 13, 2020

ಸಂಪುಟ : 47 ಸಂಚಿಕೆ : 194 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಮುದ್ರಾಂಕ ನೋಂದಣಿ ಶುಲ್ಕಕ್ಕೆ ವಿನಾಯಿತಿ

### ಕೈಗಾರಿಕಾ ಭೂಮಿ ನೋಂದಣಿ, ಅಪಾರ್ಟ್‌ಮೆಂಟ್ ನೋಂದಣಿ ಶುಲ್ಕಕ್ಕೆ ಶೇ.2ರಷ್ಟು ವಿನಾಯಿತಿ ನೀಡಲು ಸಂಪುಟ ಅಸ್ತು

ಬೆಂಗಳೂರು, ನ. 12 - ಕೈಗಾರಿಕಾ ಭೂಮಿ ನೋಂದಣಿ ಹಾಗೂ ಅಪಾರ್ಟ್‌ಮೆಂಟ್ ಖರೀದಿಸುವಾಗ ಇರುವ ನೋಂದಣಿ ಮುದ್ರಾಂಕ ಶುಲ್ಕದ ಶೇ. 2 ರಷ್ಟು ವಿನಾಯಿತಿಗೆ ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಅನುಮತಿ ನೀಡಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಮಾಧುಸ್ವಾಮಿ, ಸಂಪನ್ಮೂಲ ಕ್ರೋಢೀಕರಣ, ಕೈಗಾರಿಕಾ ಅಭಿವೃದ್ಧಿ ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಶೇ. 5 ರಿಂದ 3ಕ್ಕೆ ಮುದ್ರಾಂಕ ಶುಲ್ಕವನ್ನು ಇಳಿಸಲಾಗಿದೆ ಎಂದರು.

ಅಪಾರ್ಟ್‌ಮೆಂಟ್ ಖರೀದಿಸುವಾಗ 20 ಲಕ್ಷ ರೂ. ಒಳಗಿನ ಖರೀದಿಗೆ ಮಾತ್ರ ಶುಲ್ಕ ವಿನಾಯಿತಿ ಅನ್ವಯವಾಗಲಿದೆ ಎಂದರು.

ಮಲೆನಾಡು ಪ್ರದೇಶದ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಸಂರಕ್ಷಣಾ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸುವ ಕುರಿತಂತೆ ಡಾ. ಕಸ್ತೂರಿ ರಂಗನ್ ವರದಿ ಜಾರಿಗಾಗಿ ಸಚಿವ ಸಂಪುಟದ ಉಪಸಮಿತಿ ರಚಿಸಲು ಸಭೆ ಒಪ್ಪಿಗೆ ನೀಡಿದೆ.

ವರದಿ ಜಾರಿಗೊಳಿಸುವ ಸಂಬಂಧ ಕೆಲ ಅಪಸ್ವರಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಸರ್ಕಾರ ಇಂತಹ ನಿರ್ಧಾರ ಕೈಗೊಂಡಿದೆ. ಸಮಿತಿಯಲ್ಲಿ ಯಾರು ಸದಸ್ಯರಾಗಿರಬೇಕು ಎಂಬುದರ ಬಗ್ಗೆ ಮುಖ್ಯಮಂತ್ರಿ ತೀರ್ಮಾನ ಕೈಗೊಳ್ಳಲಿದ್ದಾರೆ.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಪೀಠಕ್ಕೆ ನೀಡಲಾಗಿದ್ದ 33.18 ಎಕರೆ ಪ್ರದೇಶವನ್ನು ಮಠ ಹಿಂದಿರುಗಿಸಿದ್ದು, ಅದನ್ನು ಸರ್ಕಾರ ಹಿಂದಕ್ಕೆ ಪಡೆಯಲು ತೀರ್ಮಾನಿಸಿದೆ. ಆರ್ಟಿಫಿಷಿಯಲ್, ಇಂಟಲಿಜೆನ್ಸ್, ರೋಬೋಟಿಕ್ ಪಾರ್ಕ್ ಸ್ಥಾಪನೆಗೆ ಭಾರತ ವಿಜ್ಞಾನ ಸಂಸ್ಥೆಯ (3ನೇ ಪುಟಕ್ಕೆ)

### ಚಿತ್ರದುರ್ಗದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು

ಚಿತ್ರದುರ್ಗ, ನ. 12 - ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಯಂತೆ ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮಂದಾಗಿದ್ದು, 60 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿದೆ.

ಚಿತ್ರದುರ್ಗದಲ್ಲಿ ಮೆಡಿಕಲ್ ಕಾಲೇಜು ನಿರ್ಮಾಣಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ವೈದ್ಯಕೀಯ ಕಾಲೇಜು ನಿರ್ಮಾಣ ಸಂಬಂಧ 60 ಕೋಟಿ ಅನುದಾನ (2ನೇ ಪುಟಕ್ಕೆ)

## ನಗರ ಅಭಿವೃದ್ಧಿಗೆ 125 ಕೋಟಿ

### ಅನುದಾನಕ್ಕೆ ಸಿಎಂ ಸಮ್ಮತಿ : ಮೇಯರ್ ಬಿ.ಜಿ. ಅಜಯ್ ಕುಮಾರ್



ದಾವಣಗೆರೆ, ನ. 12 - ನಗರವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವ ಸದುದ್ದೇಶದಿಂದ ಮಹಾತ್ಮ ಗಾಂಧಿ ವಿಕಾಸ ಯೋಜನೆಯಡಿಯಲ್ಲಿ 125 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ಬಿಡುಗಡೆ ಮಾಡಿದ್ದಾರೆ.

ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ. ರವೀಂದ್ರನಾಥ್, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮತ್ತು ಮಹಾನಗರ ಪಾಲಿಕೆ ಮಹಾಪೌರ ಬಿ.ಜಿ. ಅಜಯ್ ಕುಮಾರ್ ಅವರುಗಳ ನೇತೃತ್ವದ ನಿಯೋಗವು ತಮ್ಮನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ಅನುದಾನ ನೀಡಿದ್ದಾರೆ.

**ಸಂಸದ ಸಿದ್ದೇಶ್ವರ್, ಶಾಸಕ ರವೀಂದ್ರನಾಥ್ ಮೇಯರ್ ಅಜಯ್‌ಕುಮಾರ್ ನೇತೃತ್ವದ ನಿಯೋಗ ಸಲ್ಲಿಸಿದ ಮನವಿಗೆ ಸ್ಪಂದಿಸಿದ ಸಿಎಂ**

ಒಂದು ಲಕ್ಷ ರೂ.ಗಳೊಳಗಿನ ತುರ್ತು ಕಾಮಗಾರಿಗಳನ್ನು ಯಾವುದೇ ಟೆಂಡರ್ ಪ್ರಕ್ರಿಯೆ ಇಲ್ಲದೇ ಕೈಗೊಳ್ಳಲು ಮಹಾಪೌರರಿಗೆ ಇದ್ದ ಅಧಿಕಾರವನ್ನು 5 ಲಕ್ಷ ರೂ.ಗಳವರೆಗೆ ಹೆಚ್ಚಿಸಿ ನೀಡಲು ಮುಖ್ಯಮಂತ್ರಿಗಳು ಸಮ್ಮತಿಸಿದ್ದಾರೆ ಎಂದು (3ನೇ ಪುಟಕ್ಕೆ)

### ಸ್ಥಗಿತಗೊಂಡಿದ್ದ ಯೋಜನೆಗೆ ಮರು ಚಾಲನೆ

**ದಾವಣಗೆರೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ನಗರಪಾಲಿಕೆಯು ಈ ಹಿಂದೆ ಸಲ್ಲಿಸಿದ್ದ ಪ್ರಸ್ತಾವನೆಗೆ ಮಹಾತ್ಮ ಗಾಂಧಿ ವಿಕಾಸ ಯೋಜನೆಯಡಿಯಲ್ಲಿ 125 ಕೋಟಿ ರೂ. ಗಳ ವಿಶೇಷ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡಿತ್ತು. ಆದರೆ, ಕೊರೊನಾ ಹಿನ್ನೆಲೆಯಲ್ಲಿ ಈ ಅನುದಾನ ಬಿಡುಗಡೆಗೆ ಸರ್ಕಾರ ತಡೆ ಹಿಡಿದಿತ್ತು. ಇದೀಗ ಸಂಸದರು ಮತ್ತು ಶಾಸಕರ ನೇತೃತ್ವದಲ್ಲಿ ತಾವು ಮಾಡಿಕೊಂಡ ಮನವಿ ಮೇರೆಗೆ ಆ ಅನುದಾನವನ್ನು ಬಿಡುಗಡೆ ಮಾಡಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಮ್ಮತಿಸಿದ್ದಾರೆ ಎಂದು ಮಹಾಪೌರ ಬಿ.ಜಿ. ಅಜಯ್ ಕುಮಾರ್ ತಿಳಿಸಿದ್ದಾರೆ.**

## ನಿವೃತ್ತ ನೌಕರರಿಗೆ ಅಂಚೆಯವರ ಮೂಲಕ ಪ್ರಮಾಣ ಪತ್ರ

ನವದೆಹಲಿ, ನ. 12 – ಕೊರೊನಾ ಹಿನ್ನೆಲೆಯಲ್ಲಿ ಕೇಂದ್ರದ ನಿವೃತ್ತ ನೌಕರರು ಮನೆಯಿಂದಲೇ ಜೀವಂತ ಪ್ರಮಾಣ ಪತ್ರ ಸಲ್ಲಿಸುವ ಸಲುವಾಗಿ ಅಂಚೆಯವರ ಮೂಲಕ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ನಿರ್ದಿಷ್ಟ ಶುಲ್ಕ (2ನೇ ಪುಟಕ್ಕೆ)

## ಲಸಿಕೆ ಸಂಶೋಧನೆಗಾಗಿ 900 ಕೋಟಿ ರೂ.

ನವದೆಹಲಿ, ನ. 12 – ಕೊರೊನಾ ಲಸಿಕೆಯ ಸಂಶೋಧನೆಗಾಗಿ ಜೈವಿಕ ತಂತ್ರಜ್ಞಾನ ಇಲಾಖೆಗೆ 900 ಕೋಟಿ ರೂ.ಗಳ ಅನುದಾನ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಲಸಿಕೆಯ ನಿಜವಾದ ವೆಚ್ಚ ಹಾಗೂ ವಿತರಣೆ ವೆಚ್ಚಗಳಿಗೆ ಹೊರತಾಗಿ ಈ ಅನುದಾನ ನೀಡಲಾಗುತ್ತಿದೆ ಎಂದವರು ಹೇಳಿದ್ದಾರೆ.

### ಹೈಸ್ಕೂಲ್ ಮೈದಾನದಲ್ಲಿ 48 ಮಳಿಗೆಗಳಲ್ಲಿ ಪಟಾಕಿ ಮಾರಾಟ ಆರಂಭ

## ಪಟಾಕಿ ಮಳಿಗೆ ಉದ್ಘಾಟಿಸಿದ ಎಸ್ಸೆಸ್



ದಾವಣಗೆರೆ, ನ. 12- ಪಟಾಕಿ ವರ್ತಕರ ಮತ್ತು ಬಳಕೆದಾರರ ಸಂಘದ ವತಿಯಿಂದ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ನಗರದ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ನಿರ್ಮಿಸಲಾಗಿರುವ ಪಟಾಕಿ ಮಾರಾಟ ಮಳಿಗೆಗಳನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಸೆಸ್, ಕೊರೊನಾ ಸೋಂಕು ಎಲ್ಲಾ ರೀತಿಯ ವರ್ತಕರಿಗೂ ಬಹು ದೊಡ್ಡ ಪೆಟ್ಟು ನೀಡಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಸೋಂಕು ಇಳಿ ಮುಖವಾಗಿರುವುದು ಸಂತಸದ ವಿಷಯ ಎಂದರು.

ಪಟಾಕಿ ವರ್ತಕರು ಸೇರಿದಂತೆ ನಗರದ ಎಲ್ಲಾ ವರ್ತಕರು ಸರ್ಕಾರ ಸೂಚಿಸಿರುವ ಕೋವಿಡ್ ನಿಯಮ ಗಳನ್ನು ಅನುಸರಿಸಿ ವ್ಯವಹಾರ ನಡೆಸುವಂತೆ ಕಿವಿ ಮಾತು ಹೇಳಿದರು. ಜನತೆ ಕೊರೊನಾ ಸಂಕಷ್ಟದಲ್ಲೂ ದೀಪಾವಳಿ ಹಬ್ಬ ಮಾಡಲು ಉತ್ಸುಕರಾಗಿದ್ದಾರೆ. ಪಟಾಕಿ ವ್ಯಾಪಾರ ಎಷ್ಟರ ಮಟ್ಟಿಗೆ ನಿಮಗೆ ಲಾಭ (3ನೇ ಪುಟಕ್ಕೆ)

## ಮನೆಗಳ ಖರೀದಿಗೆ ಕೇಂದ್ರ ವಿನಾಯಿತಿ : ನಿರ್ಮಲಾ ಸೀತಾರಾಮನ್

ನವದೆಹಲಿ, ನ. 12 - ಆರ್ಥಿಕ ಉತ್ತೇಜನಕ್ಕಾಗಿ ಆಯ್ದ ಮನೆಗಳ ಮಾರಾಟ ಒಪ್ಪಂದಗಳಿಗೆ ತೆರಿಗೆ ವಿನಾಯಿತಿ, ಸಣ್ಣ ಉದ್ಯಮಗಳಿಗೆ ಸಾಲ ಗ್ಯಾರಂಟಿ ಯೋಜನೆ ಹಾಗೂ ನೂತನ ಹುದ್ದೆಗಳ ಸೃಷ್ಟಿಗೆ ಉತ್ತೇಜನ ನೀಡಿದಂತೆ ಹಲವಾರು ಕ್ರಮಗಳನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಹೆಚ್ಚುವರಿಯಾಗಿ ರಸಗೊಬ್ಬರಕ್ಕೆ ಸಬ್ಸಿಡಿ ಸೇರಿದಂತೆ ಹಲವಾರು ಕ್ರಮಗಳಿಂದಾಗಿ ಕೇಂದ್ರ ಸರ್ಕಾರ ಲಾಕ್‌ಡೌನ್ ನಂತರ ಘೋಷಿಸಿರುವ ಆರ್ಥಿಕ ಉತ್ತೇಜನಗಳ ಮೊತ್ತ 30 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ರಿಯಲ್ ಎಸ್ಟೇಟ್ ಡೆವಲಪರ್ ಹಾಗೂ ಕಟ್ಟಡ ನಿರ್ಮಾಣಕಾರರಿಗೆ ಹೆಚ್ಚುವರಿ ಹಣ ಹಾಗೂ ಗ್ರಾಮೀಣ ಉದ್ಯೋಗ ಯೋಜನೆಗೆ ಹೆಚ್ಚುವರಿ ಹಣ ವೆಚ್ಚ ಸಹ ಕೇಂದ್ರ ಸರ್ಕಾರದ ಇತ್ತೀಚಿನ ಉತ್ತೇಜಕಗಳಲ್ಲಿ ಸೇರಿವೆ.

## ರೈತರ ರಸಗೊಬ್ಬರ ಸಬ್ಸಿಡಿಗೆ 65 ಸಾವಿರ ಕೋಟಿ ರೂ.

ನವದೆಹಲಿ, ನ. 12 – ಆರ್ಥಿಕ ಉತ್ತೇಜನ ಪ್ಯಾಕೇಜ್ ಅನ್ವಯ ರೈತರ ರಸಗೊಬ್ಬರ ಸಬ್ಸಿಡಿಗೆ 65 ಸಾವಿರ ಕೋಟಿ ರೂ. ನೀಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.



ರೈತರಿಗೆ ಸಮರ್ಪಕ ರಸಗೊಬ್ಬರ ಲಭ್ಯವಾಗುವಂತೆ ಮಾಡಲು ಹಾಗೂ ಅವರು ಸಮಯಕ್ಕೆ ಸರಿಯಾಗಿ ರಸಗೊಬ್ಬರ ಪಡೆದುಕೊಳ್ಳುವಂತಾಗಲು 65 ಸಾವಿರ ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ರೋಜಗಾರ್ ಯೋಜನೆಯಡಿ ಪ್ರಸಕ್ತ ಹಣಕಾಸು ವರ್ಷದಲ್ಲಿ 10 ಸಾವಿರಿ ಕೋಟಿ ರೂ. ಗಳನ್ನು ಹೆಚ್ಚುವರಿಯಾಗಿ ನೀಡಲಾಗುವುದು ಎಂದೂ ಸೀತಾರಾಮನ್ ತಿಳಿಸಿದ್ದಾರೆ. ರಫ್ತು ಉತ್ತೇಜನಕ್ಕಾಗಿ ಎಕ್ಸಿಮ್ ಬ್ಯಾಂಕ್ 10 ಸಾವಿರ ಕೋಟಿ ರೂ.ಗಳನ್ನು ಲೈನ್ಸ್ ಆಫ್ ಕ್ರೆಡಿಟ್ ಮೂಲಕ ನೀಡಲಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

## ಹೊಸ ನೇಮಕಾತಿಗಳ ನಿವೃತ್ತಿ ನಿಧಿಗೆ ಸಬ್ಸಿಡಿ


ನವದೆಹಲಿ, ನ. 12 – ಹೊಸ ನೇಮಕಾತಿ ಮಾಡಿಕೊಳ್ಳುವವರಿಗೆ ಸಬ್ಸಿಡಿ ನೀಡುವ ಮೂಲಕ ಉದ್ಯೋಗ ಸೃಷ್ಟಿಗೆ ನೆರವಾಗುವ ಯೋಜನೆಯನ್ನು ಜಾರಿಗೆ ತರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಉದ್ಯೋಗಿಗಳು ಹಾಗೂ ಉದ್ಯೋಗದಾತರು ನಿವೃತ್ತಿ ನಿಧಿಗೆ ನೀಡುವ ಕೊಡುಗೆಗೆ ಸಬ್ಸಿಡಿ ನೀಡುವ ಮೂಲಕ ನೆರವು ಕಲ್ಪಿಸಲಾಗುವುದು ಎಂದವರು ಹೇಳಿದ್ದಾರೆ.

ಹೊಸ ನೇಮಕಾತಿಗೆ ಎರಡು ವರ್ಷಗಳವರೆಗೆ ಉದ್ಯೋಗಿಯ ಶೇ.12 ಹಾಗೂ ಉದ್ಯೋಗದಾತರ ಶೇ.12ರಷ್ಟು ಹಣವನ್ನು ಸರ್ಕಾರ ನೀಡಲಿದೆ ಎಂದವರು ಹೇಳಿದ್ದಾರೆ. ಆತ್ಮನಿರ್ಭರ್ ಭಾರತ್ ರೋಜಗಾರ್ ಯೋಜನೆಯಡಿ ಇ.ಪಿ.ಎಫ್.ಒ.ಗೆ (2ನೇ ಪುಟಕ್ಕೆ)


|| ಶ್ರೀ ವೀರಹನುಮಾನ್ ಪ್ರಸನ್ನ || || ಶ್ರೀ ಆದಿನಾಥಾಯ ನಮಃ ||

**ಶ್ರದ್ಧಾಂಜಲಿ ಕಾರ್ಯಕ್ರಮ**



ಆತ್ಮೀಯರೇ,
ನನ್ನ ಸಹೋದರನಾದ
**ಶ್ರೀ ಸಂಘವಿ ಶೇಜ್‌ಮಲ್ ದೀಪ್‌ಚಂದ್ ಜೀ**
ಮಾಲೀಕರು : ಷಾ ವೀರ್‌ಚಂದ್ ಅಸಲಾಜಿ ಅಂಡ್ ಕೋ.,
ಶ್ರೀ ವೀರಹನುಮಾನ್ ರೈಸ್ ಮಿಲ್
ಶ್ರೀ ವೀರಹನುಮಾನ್ ಆಗ್ರೋ ರೈಸ್‌ಟೆಕ್
ಟ್ರಸ್ಟಿಗಳು : ಶ್ರೀ ಸುಪಾರ್ಶ್ವನಾಥ್ ಜೈನ್‌ಮೂರ್ತಿ ಪೂಜಕ ಸಂಘ,
ಅಧ್ಯಕ್ಷರು : ಶ್ರೀ ಆದಿನಾಥ ಜೈನ್ ಮಂದಿರ

ಇವರು ದಿನಾಂಕ 5-11-2020 ನೇ ಗುರುವಾರ ದೈವಾಧೀನರಾದ ಪ್ರಯುಕ್ತ ದಿನಾಂಕ 13-11-2020 ನೇ ಶುಕ್ರವಾರ ಮಧ್ಯಾಹ್ನ 12-30 ಗಂಟೆಗೆ **ಭಾವಪೂರ್ಣ ಶ್ರದ್ಧಾಂಜಲಿ** ಕಾರ್ಯಕ್ರಮವನ್ನು **ಶ್ರೀ ವೀರಹನುಮಾನ್ ಆಗ್ರೋ ರೈಸ್ ಟೆಕ್** ಲೋಕಿಕೆರೆ ರಸ್ತೆ, ದಾವಣಗೆರೆ, ಇಲ್ಲಿ ಏರ್ಪಡಿಸಿರುತ್ತೇವೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಬೇಕಾಗಿ ಕೋರುತ್ತೇವೆ.


*ಇಂತಿ ದುಃಖತಪ್ತರು,*
ಚಗನ್‌ಲಾಲ್, ರಾಜೇಂದ್ರಕುಮಾರ್ ಕುಮಾರ್‌ಪಾಲ್, ಶ್ರೀಪಾಲ್, ಅನೂಜ್, ವಿನಯ್, ಜಿನೇಶ್, ಮೊಮ್ಮಕ್ಕಳು
S.V.A. GROUP ಸಿಬ್ಬಂದಿ ವರ್ಗ, ವರ್ತಕರು, ರೈತರು ಹಾಗೂ ಬಂಧು – ಮಿತ್ರರು.

✦ ಷಾ ವೀರ್‌ಚಂದ್ ಅಸಲಾಜಿ ಅಂಡ್ ಕೋ.,
✦ ಶ್ರೀ ವೀರಹನುಮಾನ್ ರೈಸ್ ಮಿಲ್
✦ ಶ್ರೀ ವೀರಹನುಮಾನ್ ಆಗ್ರೋ ರೈಸ್‌ಟೆಕ್, ದಾವಣಗೆರೆ.
94484 86380
94481 10206
94498 28280





# ಮಲೇಬೆನ್ನೂರು ಪಿಎಂಎಸ್ ಅಧ್ಯಕ್ಷರಾಗಿ ನಾಗರತ್ನಮ್ಮ



ಮಲೇಬೆನ್ನೂರು, ನ.12- ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂ ಘದ ಅಧ್ಯಕ್ಷರಾಗಿ ಶ್ರೀಮತಿ ನಾಗರತ್ನಮ್ಮ ಕೆ.ಜಿ. ಪರಮೇಶ್ವರಪ್ಪ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಿ.ಅಬ್ದುಲ್ ಹಾದಿ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾ ಗಿತ್ತು. ಅಧ್ಯಕ್ಷ ಸ್ಥಾನಕ್ಕೆ ನಾಗರತ್ನಮ್ಮ ಒಬ್ಬರೇ ಸ್ಪರ್ಧಿಸಿದ್ದರಿಂದ ಅವರ ಆಯ್ಕೆ ಅವಿರೋಧವಾಗಿದೆ ಎಂದು ಚುನಾವಣಾಧಿಕಾರಿಯಾಗಿದ್ದ ರುದ್ರಪ್ಪ ಘೋಷಿಸಿದರು.

ಸಂಘದ ಸಿಇಓ ಸಿದ್ದಪ್ಪ ಹಾಜರಿ ದ್ದರು. ಸಂಘದ ಉಪಾಧ್ಯಕ್ಷ ಎ.ಕೆ. ನರಸಿಂಹಪ್ಪ, ನಿರ್ದೇಶಕರಾದ ಸಿರಿಗೆರೆ ರಾಜಣ್ಣ, ಜಿ. ಮಂಜುನಾಥ್ ಪಟೇಲ್, ಸಿ.ಅಬ್ದುಲ್ ಹಾದಿ, ಎಂ.ಬಿ. ಗುಲ್ಜಾರ್, ಕೆ.ಪಿ. ಗಂಗಾಧರ್, ಬಿ. ಸೈಫುಲ್ಲಾ, ಪಿ.ಆರ್. ಕುಮಾರ್, ಯೂನುಸ್, ಶ್ರೀಮತಿ ರೇವಮ್ಮ ಐರಣಿ ಪುಟ್ಟಪ್ಪ ಅವರುಗಳು ಅವಿರೋಧ ಆಯ್ಕೆಗೆ ಸಹಕರಿಸಿದರು.

ಚುನಾವಣೆ ನಂತರ ನೂತನ ಅಧ್ಯಕ್ಷರನ್ನು ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ.ಎಸ್. ಹನುಮಂತಪ್ಪ, ಜಿಗಳಿ ಆನಂದಪ್ಪ, ತಾ.ಪಂ. ಅಧ್ಯಕ್ಷ ಎಂ.ಬಿ.ರೋಷನ್, ಮುಖಂಡರಾದ ಕೆ.ಜಿ. ವೀರನಗೌಡ್ರು, ಓ.ಜಿ. ರುದ್ರ ಗೌಡ್ರು, ಕಣ್ಣಾಳ್ ಪರಸಪ್ಪ, ತಳಸದ ಬಸವರಾಜ್, ಬಿ. ವೀರಯ್ಯ, ಉಡೇದರ ನಿಂಗಪ್ಪ, ಕೆ.ಜಿ. ನಂಜುಂಡಪ್ಪ, ಗೋಪ ನಾಳ್ ಜಯ್ಯಣ್ಣ, ಕೆ.ಜಿ. ಲೋಕೇಶ್, ಎಂ.ಬಿ. ಫಜ್ಲು, ಬೆಣ್ಣೆಹಳ್ಳಿ ಬಸವರಾಜ್, ಕೆ.ಜಿ. ಮಂಜುನಾಥ್, ಜಿಗಳೇರ ಮಂಜಣ್ಣ, ಹುಳ್ಳಳ್ಳಿ ಸಿದ್ದೇಶ್, ಕೆ. ಬಸವಲಿಂಗಪ್ಪ, ಬೆಣ್ಣೆಹಳ್ಳಿ ಸಿದ್ದೇಶ್, ಚಿಟ್ಟಕ್ಕಿ ನಾಗರಾಜ್, ಪುರಸಭೆ ಸದಸ್ಯರಾದ ಬಿ.ಸುರೇಶ್, ಎ. ಆರೀಫ್ ಅಲಿ, ಭೋವಿ ಕುಮಾರ್, ಚಮನ್‌ಷಾ, ಅಕ್ಬರ್ ಅಲಿ, ಪಿ. ಬೀರಪ್ಪ, ಕೊಕ್ಕನೂರು ಸೋಮಶೇಖರ್, ಜಿಗಳಿಯ ಬಿ.ಎಂ. ದೇವೇಂದ್ರಪ್ಪ, ಜಿ.ಪಿ. ಹನುಮಗೌಡ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದರು.

# ಹಕ್ಕುಗಳನ್ನು ಮೊಟಕುಗೊಳಿಸುವ ತಿದ್ದುಪಡಿ ಕೈಬಿಡಿ



ಹರಪನಹಳ್ಳಿ : ಸರ್ಕಾರಿ ನೌಕರರ ಒಕ್ಕೂಟ ಆಗ್ರಹ

ಹರಪನಹಳ್ಳಿ, ನ.12- ಸರ್ಕಾರಿ ನೌಕರರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಸಂವಿಧಾನ ವಿರೋಧಿ ತಿದ್ದುಪಡಿಗಳನ್ನು ಕೈಬಿಡುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ವತಿಯಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಎಂ. ಆಂಜನೇಯ ಮಾತನಾಡಿ, ಸ್ವಾತಂತ್ರ್ಯ ಬಂದು 73 ವರ್ಷ ಕಳೆದರೂ ಸಾಂವಿಧಾನಿಕ ಹಕ್ಕುಗಳಿಗೆ ಬಹು ದೊಡ್ಡ ಪೆಟ್ಟು ನೀಡುವ ನಿಯಮಗಳನ್ನೇ ಸರ್ಕಾರ ಜಾರಿಗೊಳಿಸಲು ಹೊರಟಿರುವುದು ಆಘಾತಕಾರಿ ವಿಷಯವಾಗಿದೆ. ನೌಕರರ ಸೇವಾ ನಡತೆ ನಿಯಮಗಳನ್ನು ಪರಿಷ್ಕರಿಸಲು ಹೊರಟಾಗ ವೈಯಕ್ತಿಕ ಸ್ವಾತಂತ್ರ್ಯ ಮತ್ತು ನಾಗರಿಕ ಮೂಲಭೂತ ಹಕ್ಕುಗಳಿಗೆ ಚ್ಯುತಿ ತರುವ ಅಂಶಗಳನ್ನೇ ಉಳಿಸಿಕೊಳ್ಳುವುದರ ಜೊತೆಗೆ ಕೆಲವು ಹೊಸ ಅಂಶಗಳನ್ನು ಸೇರಿಸಿರುವುದು ಆಕ್ಷೇಪಾರ್ಹವಾಗಿದೆ ಎಂದು ಆರೋಪಿಸಿದರು.

ನೌಕರರ ನಡತೆಯನ್ನು ನಿಯಂತ್ರಿಸಿ ಆ ಮೂಲಕ ಉತ್ತಮ ಪ್ರಜಾಸ್ನೇಹಿ ಆಡಳಿತ ವ್ಯವಸ್ಥೆ ರೂಪಿಸುವುದು ಬಹು ಮುಖ್ಯವೇ. ಆದರೂ ಅದೇ ವೇಳೆ ನಡತೆ ನಿಯಮಗಳಲ್ಲಿರುವ ಬ್ರಿಟಿಷ್ ಕಾಲದ ವಸಾಹತು ಮನೋಧೋರಣೆಯ ಅಂಶಗಳನ್ನು ಪರಿಷ್ಕರಿಸಿ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವುದು ಮುಖ್ಯವಾ ಗಿದ್ದು, ಉದ್ದೇಶಿತ ನಡತೆ ನಿಯಮಗಳ ಜಾರಿಯ ಪ್ರಸ್ತಾವನೆಯನ್ನು ಸರ್ಕಾರ ಸಂಪೂರ್ಣವಾಗಿ ಕೈಬಿಡಬೇಕೆಂದು ಒತ್ತಾಯಿಸುತ್ತವೆ ಎಂದರು. ಸಂಘಟನೆಯ ಪಿ. ಬಸವರಾಜ, ಪಿ. ಮಂಜಪ್ಪ, ಈ. ಯಂಕನಾಯ್ಕ, ಮೂರ್ತಿನಾಯ್ಕ ಇನ್ನಿತರರಿದ್ದರು.

## ಜ್ಞಾನ ದೀಪವ ಬೆಳಗುವ

ಅಜ್ಞಾನದ ಅಂಧಕಾರ ಕಳೆಯುವ
ಜ್ಞಾನ ದೀಪವ ಬೆಳಗುವ
ಸಾಲು ಸಾಲು ಹಣತೆಯ ಉರಿಸುತ
ಹರುಷದ ಭಾಗ್ಯವ ನೀಡುವ ದೀಪಾವಳಿ

ನರಕದ ಹಾದಿಯ ತೋರುವ ಅಸುರೀ
ಶಕ್ತಿಗಳ ಹರಣವ ಮಾಡಲು ನರಕಚತುರ್ದಶಿ
ಅರಿಷಡ್ವರ್ಗಗಳ,ಅಹಂಕಾರವ
ಬಲಿಕೊಡಲು ಬಲಿಪಾಡ್ಯಮಿ.

ದೀಪಗಳ ಬೆಳಕಲಿ ಆತ್ಮಜ್ಞಾನ ಪಡೆಯುವ
ಜ್ಞಾನ ಜ್ಯೋತಿಯ ಸಂದೇಶವ ಮನದಲಿ
ಬೆಳಗಿಸುವ
ದೀಪಂಜ್ಯೋತಿ, ಪರಂಜ್ಯೋತಿ ಮಂತ್ರವ
ಪಠಿಸುತ
ಅಂತರ್ ಜ್ಯೋತಿಯ ಉರಿಸುತ
ಹರನ ಕೃಪೆಯ ಬಯಸುತ
ಅಧ್ಯಾತ್ಮ ಶಕ್ತಿಯ ಅರಿವುದೇ ದೀಪಾವಳಿ

ಹಣತೆಯ ಹಚ್ಚುತ ಬಾಳಿನ ಕೊರತೆಯ
ನೀಗಿಸುವ
ದೀಪದಾರತಿಯ ಎತ್ತುತಾ ಸಂಬಂಧಗಳ
ಕೋಪ,ತಾಪವ ಮರೆಯುವ
ಬೆಳಕಿನ ಹಬ್ಬಕೆ ಕಳೆ ಹಚ್ಚುವ ವೈವಿಧ್ಯ ಪಟಾಕಿ
ಪರಿಶುದ್ಧತೆ ಮೂಡುವುದು
ಮನೋವಿಕಾರಗಳ ಸುಟ್ಟುಹಾಕಿ.

- ಎಂ.ಎಸ್. ಮಂಜುಳಾ ಮಂಜಪ್ಪ
ದಾವಣಗೆರೆ

# ಕದಳಿ ವೇದಿಕೆಯಿಂದ ಜಿಲ್ಲೆಯ ಮಹಿಳೆಯರಿಗೆ ಪ್ರಬಂಧ ಸ್ಪರ್ಧೆ

ದಾವಣಗೆರೆ,ನ.12- ಕದಳಿ ಮಹಿಳಾ ವೇದಿಕೆಯಿಂದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದಾವಣಗೆರೆ ಜಿಲ್ಲೆಯ ಮಹಿಳೆಯರಿಗಾಗಿ 'ಕನ್ನಡ ಸಾಹಿತ್ಯಕ್ಕೆ ಶರಣರ ಕೊಡುಗೆ' ವಿಷಯ ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಕಾರ್ಯದರ್ಶಿ ಶ್ರೀಮತಿ ಮಮತಾ ನಾಗರಾಜ್ ತಿಳಿಸಿದ್ದಾರೆ. ಎರಡು ಪುಟಗಳಿಗೆ ಮೀರದಂತೆ ಬರೆದ ಪ್ರಬಂಧವನ್ನು ಇದೇ ದಿನಾಂಕ 20ರೊಳಗೆ ಶ್ರೀಮತಿ ವಿಜಯಲಕ್ಷ್ಮಿ ಬಸವರಾಜ್, ಮನೆ ಸಂ. 1847/65, 1ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ. ಮೊ. 9481288775 ಇಲ್ಲಿಗೆ ಕಳುಹಿಸಿಕೊಡಬೇಕು.

# ಚನ್ನಗಿರಿಗೆ ಇಂದು ಸಚಿವ ಭೈರತಿ ಬಸವರಾಜ್

ನಗರಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರು ಇಂದು ಬೆಳಿಗ್ಗೆ 11 ಗಂಟೆಗೆ ಚನ್ನಗಿರಿ ಪ್ರವಾಸಿ ಮಂದಿರಕ್ಕೆ ಆಗಮಿಸುವವರು. ಚನ್ನಗಿರಿಯ ಸರ್ಕಾರಿ ಕ್ರೀಡಾಂಗಣದಲ್ಲಿ ಮಧ್ಯಾಹ್ನ 12 ಗಂಟೆಗೆ ಏರ್ಪಾಡಾಗಿರುವ ಜನಸ್ಪಂದನ ಮತ್ತು ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 2.30 ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

# ನಿವೃತ್ತ ನೌಕರರಿಗೆ ಪತ್ರ

**(1ನೇ ಪುಟದಿಂದ)** ಪಾವತಿಸುವ ಮೂಲಕ ಮನೆಯಿಂದಲೇ ಅಂಚೆಯವರ ಮೂಲಕ ಪ್ರಮಾಣ ಪತ್ರವನ್ನು ಸಲ್ಲಿಸಬಹುದಾಗಿದೆ ಎಂದು ಕೇಂದ್ರ ಸಿಬ್ಬಂದಿ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಕಬ್ಬಿನ ಟ್ರ್ಯಾಕ್ಟರ್ ಚಾಲಕನ ಅಜಾಗರೂಕತೆ

## ತಿನಿಸಿನ ಸಾಮಗ್ರಿಗಳ ಆಟೋ ಪಲ್ಟಿ: ವ್ಯಾಪಾರಿ-ಚಾಲಕನ ಜೀವ ರಕ್ಷಣೆ

ದಾವಣಗೆರೆ, ನ.12- ಕಬ್ಬು ಹೊತ್ತು ಸಾಗುತ್ತಿದ್ದ ಟ್ರ್ಯಾಕ್ಟರ್ ಚಾಲಕನ ಅಜಾಗರೂಕತೆಯ ಚಾಲನೆ ಪರಿಣಾಮ ಡಿಕ್ಕಿ ಸಂಭವಿಸಿ ತಿನಿಸಿನ ಸಾಮಗ್ರಿಗಳ ಸರಕು ಸಾಗಿಸುತ್ತಿದ್ದ ಆಪೆ ಆಟೋ ಪಲ್ಟಿಯಾಗಿ ತಿನಿಸು ವ್ಯಾಪಾರಿ ಮತ್ತು ಚಾಲಕನಿಗೆ ಸಣ್ಣ-ಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾದ ಘಟನೆ ನಗರದ ಹದಡಿ ರಸ್ತೆಯ 'ಜನತಾವಾಣಿ' ಕಚೇರಿ ಸಮೀಪದಲ್ಲಿ ಇಂದು ಸಂಜೆ ಸಂಭವಿಸಿತು.

ಬಸವಾಪಟ್ಟಣದ ತಿನಿಸಿನ ವ್ಯಾಪಾರಿ ದಾವಣಗೆರೆಯಲ್ಲಿ ಚಿಪ್ಸ್ ಮತ್ತಿತರೆ ತಿನಿಸಿನ ಸಾಮಗ್ರಿಗಳನ್ನು ಖರೀದಿಸಿ ಆಪೆ ಆಟೋದಲ್ಲಿ ಕುಂದೂರಿಗೆ ಹದಡಿ ರಸ್ತೆಯ ಮಾರ್ಗವಾಗಿ ಸಾಗಿಸುವಾಗ ಅದೇ ಮಾರ್ಗವಾಗಿ ಹಿಂದಿನಿಂದ ಬಂದ ಕುಕ್ಕುವಾಡ ಕಡೆಗೆ ಸಾಗುತ್ತಿದ್ದ ಕಬ್ಬಿನ ಟ್ರ್ಯಾಕ್ಟರ್ ಯಾವುದೇ ಅಂತರವಿಲ್ಲದೇ ಏಕಾಏಕಿ ಪಕ್ಕದಲ್ಲೇ ಸಾಗಿದ್ದು, ಇದರಿಂದ ಕಬ್ಬಿನ ದಿಂಡು ತಿನಿಸಿನ ಸಾಮಗ್ರಿಯುಳ್ಳ ಚೀಲಕ್ಕೆ ತಾಗಿದಾಗ ಆಟೋ ಪಲ್ಟಿ ಹೊಡೆಯಿತು.

ಆಟೋ ಡೋರ್ ಜಾಮ್ ಆಗಿ ಚಾಲಕ ಮತ್ತು ತಿನಿಸಿನ ವ್ಯಾಪಾರಿ ಒಳಗೆ ಸಿಲುಕಿದ್ದರು. ಪಲ್ಟಿಯಾದ ಜಾಗದ ಸಮೀಪವೇ ವಿದ್ಯುತ್ ಕಂಬ ಸಹ ಇತ್ತು. ಅಲ್ಲದೇ ವಾಹನಗಳ ಸಂಚಾರ ಸಹ ಹೆಚ್ಚಿತ್ತು. ಅದೃಷ್ಟವಶಾತ್ ಆಟೋ ಪಲ್ಟಿಯಾಗಿದ್ದನ್ನು ಕಂಡ ಮಾನವೀಯತೆಯುಳ್ಳ ನಾಗರಿಕರು ತಕ್ಷಣವೇ ಚಾಲಕ ಮತ್ತು ತಿನಿಸಿನ ವ್ಯಾಪಾರಿಯನ್ನು ರಕ್ಷಿಸಿ ಉಪಚರಿಸಿ ಪ್ರಾಣಾಪಾಯದಿಂದ ಪಾರು ಮಾಡಿದರು. ತಿನಿಸಿನ ವ್ಯಾಪಾರಿಗೆ ಒಳಪೆಟ್ಟಿನ ನೋವು ಒಂದೆಡೆಯಾದರೆ, ಈ ಘಟನೆಯಿಂದ ಗಾಬರಿಯಾಗಿ ಕೆಲ ಕಾಲ ಮನಸ್ಸಿಗೆ ಆಘಾತ ಮಾಡಿಕೊಂಡಿದ್ದರು. ಆಗ ರಕ್ಷಣೆಗೆ ಬಂದವರು ಸಮಾಧಾನ ಮತ್ತು ಧೈರ್ಯ ತುಂಬಿದ್ದು ಕಂಡು ಬಂತು.

ಡಿಕ್ಕಿಪಡಿಸಿದ ಟ್ರ್ಯಾಕ್ಟರ್ ಚಾಲಕ ಯಾವುದೇ ಮಾನವೀಯತೆ ತೋರದೇ ಸಾಗಿದ್ದು ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಯಿತು. ಈ ಸಂಬಂಧ ಯಾವುದೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿಲ್ಲ.

## ಗ್ರಾಸಿಂನಲ್ಲಿ ಕೃತಕ ಕಾಲು ಜೋಡಣೆ

ರಾಣೇಬೆನ್ನೂರು, ನ.12- ಕುಮಾರಪಟ್ಟಂನ ಗ್ರಾಸಿಂ ಜನಸೇವಾ ಟ್ರಸ್ಟ್ ವತಿಯಿಂದ ದಿ. ಆದಿತ್ಯ ವಿಕ್ರಂ ಬಿರ್ಲಾ ಅವರ ಜನ್ಮದಿನ ನವಂಬರ್ 19 ರಂದು ಉಚಿತವಾಗಿ ಕೃತಕ ಕಾಲು ಜೋಡಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ರೇಣುಕ ನಾಗನೂರ (99643 48288), ಮಂಜುನಾಥ (87224 29612) ಅವರುಗಳನ್ನು ಸಂಪರ್ಕಿಸಬಹುದು.

## ದಿನದ ಚುಟುಕು

ಬದುಕು ಇರಬೇಕು ಹೀಗೆ
ನದಿಯ ಹರಿವಿನ ಹಾಗೆ
ಬದುಕಲ್ಲಿ ನೂರೆಂಟು ತಿರುವು
ಮುನ್ನುಗ್ಗಿ ಶ್ರಮಿಸಲು ಅರಿವು.

- ಶ್ರೀಮತಿ ವೀಕೆಎಂ

## ಎಂ. ನಾರಾಯಣಪ್ಪ ನಿಧನ



ದಾವಣಗೆರೆ ಬಂಬೂಬಜಾರ್ ವಾಸಿ ಎಂ. ನಾರಾಯಣಪ್ಪ (56) ಅವರು ದಿನಾಂಕ 12.11.2020 ರಂದು ಗುರುವಾರ ರಾತ್ರಿ 9.40 ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.11.2020 ರ ಶುಕ್ರವಾರ ಸಂಜೆ 4 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

# ನೇಮಕಾತಿಗಳ ನಿವೃತ್ತ ನಿಧಿಗೆ ಸಬ್ಸಿಡಿ

**(1ನೇ ಪುಟದಿಂದ)** ಈ ಹಣ ನೀಡಲಾಗುವುದು. ಮಾಸಿಕ 15 ಸಾವಿರಕ್ಕಿಂತ ಕಡಿಮೆ ವೇತನ ಹೊಂದಿರುವವರಿಗೆ ಈ ಯೋಜನೆಯ ಅನ್ವಯವಾಗಲಿದೆ.

ಕೊರೊನಾ ಸಮಯದಲ್ಲಿ ಮಾರ್ಚ್ 1, 2020ರಿಂದ ಅಕ್ಟೋಬರ್ 1, 2020ರ ನಡುವೆ ಕೆಲಸದಿಂದ ನಿರ್ಗಮಿಸಿರುವ ಇ.ಪಿ.ಎಫ್. ಸದಸ್ಯರಾಗಿರುವ ಉದ್ಯೋಗಿಗಳಿಗೂ ಸಹ ಈ ನೆರವು ಸಿಗಲಿದೆ.

ಸೆಪ್ಟೆಂಬರ್ 2020ರಿಂದ ನೇಮಕವಾಗಿ ಇ.ಪಿ.ಎಫ್.ಒ.ದಲ್ಲಿ ಇರುವ ಉದ್ಯೋಗಿಗಳಿಗೆ ಯೋಜನೆ ನೆರವಾಗಲಿದೆ.

50 ಉದ್ಯೋಗಿಗಳನ್ನು ಹೊಂದಿರುವ ಕಂಪನಿ ಕನಿಷ್ಠ ಇಬ್ಬರನ್ನು ಸೇರ್ಪಡೆ ಮಾಡಿದಾಗ ಈ ಯೋಜನೆ ಅನ್ವಯವಾಗಲಿದೆ. 50ಕ್ಕಿಂತ ಹೆಚ್ಚು ಉದ್ಯೋಗಿಗಳಿರುವ ಕಂಪನಿ ಕನಿಷ್ಠ ಐದು ಜನರನ್ನು ಸೇರ್ಪಡೆ ಮಾಡಿಕೊಳ್ಳಬೇಕಿದೆ. ಈ ಯೋಜನೆ ಜೂನ್ 30, 2021ರವರೆಗೆ ಜಾರಿಯಲ್ಲಿರಲಿದೆ.

# ಚಿತ್ರದುರ್ಗದಲ್ಲಿ ವೈದ್ಯಕೀಯ ಕಾಲೇಜು

**(1ನೇ ಪುಟದಿಂದ)** ಬಿಡುಗಡೆಗೆ ಯಡಿಯೂರಪ್ಪ ಸೂಚನೆ ನೀಡಿದ್ದಾರೆ.

ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಚಿತ್ರದುರ್ಗದಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣಕ್ಕಾಗಿ ಬಿಡುಗಡೆ ಮಾಡಬೇಕಿದ್ದ ಅನುದಾನಕ್ಕೆ ತಡೆ ನೀಡಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ವೈದ್ಯಕೀಯ ಸಚಿವ ಬಿ. ಶ್ರೀರಾಮುಲು, ಚಿತ್ರದುರ್ಗದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭಿಸಬೇಕೆಂಬ ದಶಕಗಳ ಕನಸು ನನಸಾಗುತ್ತಿದೆ ಎಂದಿದ್ದಾರೆ.

ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಯಡಿಯೂರಪ್ಪ ಅವರು ಮೊದಲ ಕಂತಿನ ಭಾಗವಾಗಿ 60 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಕಾಲೇಜು ಸ್ಥಾಪನೆಯಿಂದ ಈ ಭಾಗದ ಜನರಿಗೆ ಇನ್ನಷ್ಟು ಉತ್ತಮ ಹಾಗೂ ತ್ವರಿತ ಆರೋಗ್ಯ ಸೇವೆ ದೊರಕಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಶ್ಯಾಗಲೆ ಬೀಸನಳ್ಳಿ ಶಂಕರಮ್ಮ ನಿಧನ



ದಾವಣಗೆರೆ ತಾಲ್ಲೂಕು ಶ್ಯಾಗಲೆ ಗ್ರಾಮದ ಬೀಸನಳ್ಳಿ ದೇವೇಂದ್ರಪ್ಪ ಇವರ ಧರ್ಮಪತ್ನಿ **ಶ್ರೀಮತಿ ಶಂಕರಮ್ಮ** ಅವರು ದಿನಾಂಕ 12.11.2020ರ ಗುರುವಾರ ಸಂಜೆ 4.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.11.2020ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಶ್ಯಾಗಲೆ ಗ್ರಾಮದ ಅವರ ತೋಟದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು, ಬಿ. ದೇವೇಂದ್ರಪ್ಪ,
✦ ಸುಧಾ ಡಿ.ಬಿ. ಮತ್ತು ದೇವೇಂದ್ರಪ್ಪ ✦ ಗಣೇಶ್ ಡಿ.ಬಿ. ಮತ್ತು ಶ್ರೀಮತಿ ಲತಾ ✦ ಸುರೇಶ್ ಡಿ.ಬಿ. ಮತ್ತು ಶ್ರೀಮತಿ ಮಧು ✦ ಶ್ರೀಮತಿ ವೀಣಾ ಡಿ.ಬಿ. ಮತ್ತು ಜಗದೀಶ್ ಮತ್ತು ಮಕ್ಕಳು, ಚಿಕ್ಕಮಗಳೂರು. ✦ ಬೀಸನಳ್ಳಿ ವಂಶಸ್ಥರು, ಶ್ಯಾಗಲೆ.

## ಶಿವ ಸಹಕಾರಿ ಬ್ಯಾಂಕ್ ನಿಯಮಿತ.,

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.
ಫೋ. : 08192 -256107

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002

### ಕಬ್ಜೆ ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಈ ಕೆಳಗೆ ರುಜು ಮಾಡಿರುವ ಶ್ರೀ ಎ.ಆರ್. ಸಿದ್ದರಾಮಪ್ಪ, ಪ್ರಧಾನ ವ್ಯವಸ್ಥಾಪಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಬ್ಯಾಂಕಿನ ಅಧಿಕೃತ ಅಧಿಕಾರಿಯಾದ ನಾನು ಸೆಕ್ಯುರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಎರಡನೇ) ಆಧ್ಯಾದೇಶ 2002 (ಆಧ್ಯಾದೇಶ 2002ರ 3) ಕಲಂ 13(12) ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 9ರ ಅಂತರ್ಗತವಾಗಿ ನನ್ನ ಅಧಿಕಾರವನ್ನು ಉಪಯೋಗಿಸಿ ಶ್ರೀ ಮಂಜಯ್ಯ ಜಿ.ಎಸ್. ಬಿನ್ ಗುರುಶಾಂತಯ್ಯ ಎಂ., 2ನೇ ಮೇನ್, 3ನೇ ಕ್ರಾಸ್, ಬಿ.ವಿ. ಕೆ.ಎಸ್. ಲೇಔಟ್, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ. ಇವರಿಂದ ಬ್ಯಾಂಕಿಗೆ ಸಲ್ಲಬೇಕಾದ ಬಾಕಿ ಮೊಬಲಗು ರೂ. 17,37,906-00 (ರೂ. ಹದಿನೇಳು ಲಕ್ಷದ ಮೂವತ್ತೇಳು ಸಾವಿರದ ಒಂಬೈನೂರ ಆರು ಮಾತ್ರ)ಗಳನ್ನು ಪಾವತಿಸುವಂತೆ 60 ದಿನಗಳ ಕಾನೂನು ಬದ್ಧ ತಗಾದೆಯನ್ನು ದಿನಾಂಕ : 22.06.2020 ರಂದು ಕೊಟ್ಟಿದ್ದರೂ ಕೂಡಾ ಈ ಅವಧಿ ಒಳಗೆ ಬಾಕಿದಾರ ಸಾಲಗಾರನು ಸಾಲವನ್ನು ಪಾವತಿಸಲು ವಿಫಲವಾದ ಪ್ರಯುಕ್ತ ಸದರಿ ಕಾನೂನಿನ 13 (4) ಮತ್ತು ಸದರಿ ಆಧ್ಯಾದೇಶದ ನಿಯಮ 9 ರಂತೆ ನಾನು ನನ್ನ ಅಧಿಕಾರವನ್ನು ಉಪಯೋಗಿಸಿ, ಈ ಕೆಳಗೆ ಕಂಡ ಸ್ಥಿರ ಆಸ್ತಿಗಳನ್ನು ಬ್ಯಾಂಕಿಗೆ ಬರಬೇಕಾದ ಸಾಲಕ್ಕಾಗಿ ದಿನಾಂಕ : 13.11.2020 ಈ ದಿನ ನನ್ನ ಕಬ್ಜೆಗೆ ವಹಿಸಿಕೊಂಡಿರುತ್ತೇನೆ ಎಂದು ಸಾಲಗಾರನಿಗೂ, ಸಾರ್ವಜನಿಕರಿಗೂ ಈ ನೋಟೀಸು ಮುಖೇನ ಗಮನ ತರುತ್ತಿದ್ದೇನೆ.

ಸಾಲಗಾರನು ಮತ್ತು ಸಾರ್ವಜನಿಕರು,ಶಿವ ಸಹಕಾರಿ ಬ್ಯಾಂಕ್ ನಿಯಮಿತ, ಚಿತ್ರದುರ್ಗ ಶಾಖೆ, ಚಿತ್ರದುರ್ಗ ಬ್ಯಾಂಕಿಗೆ ಬರತಕ್ಕ ರೂ. 17,37,906-00 (ರೂ. ಹದಿನೇಳು ಲಕ್ಷದ ಮೂವತ್ತೇಳು ಸಾವಿರದ ಒಂಬೈನೂರು ಆರು ಮಾತ್ರ) ಋಣ (ಚಾರ್ಜ್) ಮತ್ತು ದಿನಾಂಕ : 22.06.2020 ರಿಂದ ತಗಲುವ ಬಡ್ಡಿ ಸೇರಿಸಿ ಸಂದಾಯವಾಗುವ ತನಕ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ರೀತಿಯ ವ್ಯವಹಾರವನ್ನು ಮಾಡತಕ್ಕದ್ದಲ್ಲ ಎಂದು ಈ ಮೂಲಕ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ.

**ಸ್ಥಿರಾಸ್ತಿ ವಿವರಗಳು :** ಶ್ರೀ ಮಂಜಯ್ಯ ಜಿ.ಎಸ್. ಬಿನ್ ಗುರುಶಾಂತಯ್ಯ ಎಂ., 2ನೇ ಮೇನ್, 3ನೇ ಕ್ರಾಸ್, ಬಿ.ವಿ. ಕೆ.ಎಸ್. ಲೇಔಟ್, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ, ಇವರ ಸಂಬಂಧಪಟ್ಟ ವಾಸದ ಮನೆ ಸೈಟ್ ನಂ. 27, ನಗರಸಭೆ ಖಾತೆ ನಂ. 2700/2207, ಅಸೆಸ್‌ಮೆಂಟ್ ನಂ. 4936/4365, ಅಳತೆ : ಪೂರ್ವ-ಪಶ್ಚಿಮ 40 ಅಡಿ, ಮತ್ತು ಉತ್ತರ-ದಕ್ಷಿಣ : 30 ಅಡಿ, ಒಟ್ಟು ಅಳತೆ 1200 ಅಡಿ, 3ನೇ ಬ್ಲಾಕ್, ನೆಹರು ನಗರ, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ, ನಗರಸಭೆಗೆ ಒಳಪಟ್ಟಿರುತ್ತದೆ. ಮತ್ತು ಹೊಸ ಖಾತೆ ನಂ. 620/4936/27ಎ, 3101/4936/27, ಕಟ್ಟಡದ ವಿವರ ಈ ಕೆಳಕಂಡಂತೆ ಇರುತ್ತದೆ.

| ವಿವರಗಳು : | ಫ್ಲಿನ್ತ್ ಏರಿಯಾ ಚ. ಅಡಿಗಳಲ್ಲಿ |
|---|---|
| 1) ಕೆಳ ಅಂತಸ್ತು | 1000 |
| 2) ಮೊದಲನೇ ಮಹಡಿ | 1000 |

**ಇದಕ್ಕೆ ಚಕ್ಕುಬಂದಿ :**
ಪೂರ್ವಕ್ಕೆ : 30 ಅಡಿ ರಸ್ತೆ, ಪಶ್ಚಿಮಕ್ಕೆ ; ಕನ್ಸರ್‌ವೆನ್ಸಿ, ಉತ್ತರಕ್ಕೆ : ಸೈಟ್ ನಂ. 26, ದಕ್ಷಿಣಕ್ಕೆ : ಸೈಟ್ ನಂ. 28

ದಾವಣಗೆರೆ.
ದಿನಾಂಕ: 13.11.2020

ಸಹಿ/- (ಎ.ಆರ್. ಸಿದ್ದರಾಮಪ್ಪ)
ಪ್ರಧಾನ ವ್ಯವಸ್ಥಾಪಕರು ಮತ್ತು ಅಧಿಕೃತ ಅಧಿಕಾರಿ,
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.

**ಸೈಟು ಮಾರಾಟಕ್ಕೆ**
ಶಿವ-ಪಾರ್ವತಿ ಲೇಔಟ್,
ಹೊಸ ಬನಶಂಕರಿ, ಕರ್ನಾಟಕ ಗೃಹ ಮಂಡಳಿ.
ಶಿವ : 40x60 ಪೂ, 50x100 ಪೂ, 34x54 ಪೂ, 30x46 ಪೂ. ಬನಶಂಕರಿ : 30x40 ಪೂ. 40x70 ಪೂ. 35x60 ಉತ್ತರ, ಪೂರ್ವ. KHB : 30x40, 30x50, 40x50, 50x80, 80x100.
ಕಿರಣ್ ಬೂಸ್ನೂರ್ (ಏಜೆಂಟ್)
97315-63409

**ಅಪಾರ್ಟ್‌ಮೆಂಟ್‌ನಲ್ಲಿ**
ಮನೆಗಳು ಮಾರಾಟಕ್ಕಿವೆ. 2 ಬೆಡ್‌ರೂಂ ಮನೆಗಳು 100 ಅಡಿ ರೋಡಿಗೆ ಹತ್ತಿರ ಜಯನಗರದಲ್ಲಿ Rs 28 ಲಕ್ಷದಿಂದ 44 ಲಕ್ಷದವರೆಗೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ,
20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಹೊಸ ಕಾಂಪ್ಲೆಕ್ಸ್‌ನಲ್ಲಿ ಹೊಸ ಬಸ್ ಸ್ಟಾಂಡ್ ಹತ್ತಿರ**
ವಾಲಾವಲ್ಕರ್ ಪೆಟ್ರೋಲ್ ಬಂಕ್ ಹಿಂಭಾಗ ಹೊಸ ಕಾಂಪ್ಲೆಕ್ಸ್‌ನಲ್ಲಿ 27x75 East ಫಸ್ಟ್ ಫ್ಲೋರ್‌ನಲ್ಲಿ ಹಾಲ್ ಬಾಡಿಗೆಗೆ ಅಥವಾ ಲೀಜ್‌ಗೆ ದೊರೆಯುತ್ತದೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x45 ಪೂರ್ವ ಅಕ್ಕ-ಪಕ್ಕ, 40x60 ಪೂರ್ವ, 30x56 ಪೂರ್ವ ಆಂಜನೇಯ ಬಡಾವಣೆ, ವಿದ್ಯಾನಗರದಲ್ಲಿ ಮನೆ ಬಾಡಿಗೆ ಮತ್ತು ಲೀಸ್‌ಗೆ ದೊರೆಯುತ್ತದೆ.
ಸ್ವಾಮಿ, ಏಜೆಂಟ್ 97421 44715
ಶಾಮನೂರು ನಾಗರಾಜ್: 98448 83303

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು & ಸೈಟುಗಳು ಮಾರಾಟಕ್ಕಿವೆ**
30x50 North ಮನೆ, 30x40 East ಮನೆ
50x80 South ಸೈಟ್ 80 ಅಡಿ ರೋಡಿಗಿದೆ. 50x80 East
30x50 East 30x40 South
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**SHOPS FOR RENT**
(with Wash Room Facility)
N.R. Road, Davanagere.
Contact
94483 69523

**ಸೈಟುಗಳು ಮಾರಾಟಕ್ಕಿವೆ**
30x40, 30x40 west ಅಕ್ಕ-ಪಕ್ಕ ಎಸ್.ಎಸ್. ಲೇಔಟ್ 'ಎ' ಬ್ಲಾಕ್‌ನಲ್ಲಿ. 30x50 North, ಡಾಲರ್ಸ್ ಕಾಲೋನಿಯಲ್ಲಿ. 40x60 East, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ .
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ.
ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಸೈಟ್ ಮತ್ತು ಅಪಾರ್ಟ್‌ಮೆಂಟ್ ಬಾಡಿಗೆಗೆ, ಮಾರಾಟಕ್ಕೆ ಇದೆ**
ಎಸ್.ಎಸ್. ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ಸಿದ್ದವೀರಪ್ಪ ಬಡಾವಣೆ, KHB ಕಾಲೋನಿ, ಜೆ.ಹೆಚ್. ಪಟೇಲ್ ನಗರ, ಬನಶಂಕರಿ ಬಡಾವಣೆ 30×50, 30×48, 20×30, 50×50, 50×70
94481-85946

**ಮನೆ ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ ದಿಕ್ಕಿನ ಹೊಸ ಮನೆ ಮಾರಾಟಕ್ಕಿದೆ. 30x50 ಪಶ್ಚಿಮ, 45x50 ಪಶ್ಚಿಮ ಕಾರ್ನರ್ ದಕ್ಷಿಣ ವಾಜಪೇಯಿ ಬಡಾವಣೆಯಲ್ಲಿ
ಶಾಮನೂರು ಧನ್ಯಕುಮಾರ್, ಏಜೆಂಟ್
97415 62589
ಸ್ವಾಮಿ, ಏಜೆಂಟ್ 97421 44715

**ಮಳಿಗೆ ಖಾಲಿ ಇದೆ**
ನರಸರಾಜ ರಸ್ತೆಯಲ್ಲಿ ಕಾರ್ನರ್ ಮಳಿಗೆ ಖಾಲಿ ಇದೆ. ಆಸಕ್ತರು ಸಂಪರ್ಕಿಸಿ:
70199 88456

**ಮಾರಾಟಕ್ಕೆ**
ಭೂಮಿಕ ಲೇಔಟ್ ಸೈಟ್-30×38, SS ಲೇಔಟ್ ಸೈಟ್-30×40, MCC 'B' ಬ್ಲಾಕ್ ಹಳೆಯ ಮನೆ -28×64, ನಿಟ್ಟುವಳ್ಳಿ ಸೈಟ್-23×45, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು)30×40
78996 36597, 99165 25828

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂಡ್ ಸೈಟ್‌ಗಳು ಮಾರಾಟಕ್ಕಿವೆ.
RS. 899 Per Sq ft
ದೀಪಾವಳಿ ವಿಶೇಷ ರಿಯಾಯಿತಿಯಲ್ಲಿ
93431 10009
98441 24217
86603 11021

**ಮನೆ ಮಾರಾಟಕ್ಕಿದೆ**
ದಾವಣಗೆರೆ ನಗರದ ಆಂಜನೇಯ ಬಡಾವಣೆಯಲ್ಲಿರುವ 35x50 ಅಡಿ ಅಳತೆಯಲ್ಲಿರುವ ಎರಡು ಬೆಡ್ ರೂಂನ ಸುಸಜ್ಜಿತವಾದ ಉತ್ತರ ದಿಕ್ಕಿಗಿರುವ ಇಂಡಿಪೆಂಡೆಂಟ್ RCC ಮನೆ ಮಾರಾಟಕ್ಕಿದೆ.
99454 62045, 94801 24623
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಮನೆ ಲೀಜ್/ಬಾಡಿಗೆಗೆ**
ಕೆ.ಟಿ.ಜೆ. ನಗರ 16ನೇ ಕ್ರಾಸ್‌ನಲ್ಲಿ ಡಬಲ್ ಬೆಡ್‌ರೂಂ ಮನೆ ಲೀಜ್‌ಗೆ ಅಥವಾ ಬಾಡಿಗೆಗೆ ಇದೆ
ಸಂಪರ್ಕಿಸಿ:
99452 31451
98453 24475

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮಹಿಳಾ P.G & ರೂಂಗಳು**
ಪೀಠೋಪಕರಣಗಳು ಮತ್ತು ಎಲ್ಲಾ ಸೌಕರ್ಯ ಹೊಂದಿರುವ ಮಹಿಳಾ ಪಿ.ಜಿ ಮತ್ತು ರೂಂಗಳು ಆಂಜನೇಯ ಬಡಾವಣೆಯ, ಆಂಜನೇಯ ದೇವಸ್ಥಾನದ ಹತ್ತಿರ ಇರುತ್ತದೆ.
ಸಂಪರ್ಕಿಸಿ :
99729 75085

**ಸಂಘ-ಸಂಸ್ಥೆಗಳ NGO ಟ್ರಸ್ಟ್ ಗಳ GST ರಿಜಿಸ್ಟ್ರೇಷನ್ & ನವೀಕರಣ ಮಾಡಿಕೊಡುತ್ತೇವೆ.**
M : 94838 62779

**ಬೇಕಾಗಿದ್ದಾರೆ**
"ಮೆಡಿಹೌಸ್" ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC Pass/ Fail/ Any Degree.
ಕಾವೇರಿ ಮೆಡಿಹೌಸ್ (ಪ್ರೈ)
ಚೇತನಾ ಹೋಟೆಲ್ ಹತ್ತಿರ,
ಪಿ.ಜೆ. ಬಡಾವಣೆ, ದಾವಣಗೆರೆ.

**ಬೇಕಾಗಿದ್ದಾರೆ**
ಟ್ಯಾಲಿಯಲ್ಲಿ ಬಿಲ್ಲಿಂಗ್ ಮಾಡಲು ಅನುಭವವಿರುವ ಯುವಕರು ಬೇಕಾಗಿದ್ದಾರೆ.
ಸಮಯ: ಬೆ. 11 ರಿಂದ ರಾತ್ರಿ 9 ರವರೆಗೆ
ವೇತನ 8,000 + PF, ESI
ಸಂಪರ್ಕಿಸಿ:
90352 55729

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ZEN VO**
UPS/ Battery/ Solar PCU
Easy EMI Facility avalable
City Electronic Systems
# 212/14, 3rd main Road, P.J Extn Davanagere.
98453 52371, 96865 77677

**ಬಾಡಿಗೆಗೆ ಇದೆ**
3 ಬೆಡ್‌ರೂಂವುಳ್ಳ, ಬೋರ್‌ವೆಲ್ ವ್ಯವಸ್ಥೆಯಿರುವ ಕಛೇರಿ ಮತ್ತು ವಾಸಕ್ಕೆ ಅನುಕೂಲವಿರುವ ಮನೆಯೊಂದು ಮೊದಲನೇ ಮಹಡಿಯಲ್ಲಿ ಬಾಡಿಗೆಗಿದೆ. ಸಂಪರ್ಕಿಸಿ: ಶಿವಕುಮಾರ್
ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಕೆ.ಬಿ.ಬಡಾವಣೆ, ದಾವಣಗೆರೆ.
81478 74601, 99862 11294
(ಸಸ್ಯಹಾರಿಗಳಿಗೆ ಮಾತ್ರ)

**JOBS**
MCS ACADEMY
Training & Placement Cell
98444 92888

**ಹೋಂ ನರ್ಸಿಂಗ್ ಸೇವೆ & ಕೆಲಸ**
ಆಸ್ಪತ್ರೆಗಳಿಗೆ, ಮನೆಗಳಿಗೆ, ವೃದ್ದರು, ರೋಗಿಗಳನ್ನು ಆರೈಕೆ ಮಾಡಲು ಅನುಭವವಿರುವ ಹೋಂ ನರ್ಸ್‌ಗಳನ್ನು ಕಳುಹಿಸಲಾಗುವುದು. ಮಹಿಳೆಯರಿಗೆ, ಪುರುಷರಿಗೆ ಹೋಂ ನರ್ಸಿಂಗ್ ಕೆಲಸ ಲಭ್ಯವಿದೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಊಟ,ವಸತಿ ಉಚಿತ.
95139 17777
95136 58555

**ನೇರ ಪರೀಕ್ಷೆಗಳು**
S.S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
70193 10599

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ದೂರ ಶಿಕ್ಷಣ ಪರೀಕ್ಷೆಗಳು**
UGC, AICT & DEB Recognisde University
S.S.L.C. PUC, B.A, B.Com, B.Sc, B.C.A, M.A, M.Com, M.Sc, B.Lib, M.Lib, M.B.A, M.C.A. Diploma Course, B.Tech, Para Medical Course & All Courses
77609 55550, 96200 28627

**Required**
Male showroom sales executive with accounts experience in Tally for a reputed furniture showroom in Davanagere showroom. Salary will be paid best according to experience. selected Candidates should join immediately. Contact
86607 91774 for interview.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**WALL PAPER**
@ offer Price
10 ₹ per Sq.Ft
(600 - 900 per Roll)
Contact :
INTERIOR HIVE
98860-04771
63635-61331

**WANTED**
Job: wanted male (20+) for field work 5 hr/day
99160 41212

**PG ಬಿಲ್ಡಿಂಗ್ ಬಾಡಿಗೆಗೆ ಇದೆ**
16 ಸುಸಜ್ಜಿತ ಅಟ್ಯಾಚ್ಡ್ ಬಾತ್‌ರೂಂ ಇರುವ ಹಾಗೂ 1000sq feet ಡೈನಿಂಗ್ ಹಾಲ್ ಹಾಗೂ ನಲ್ಲಿ ಮತ್ತು ಬೋರ್ ನೀರು ಸೌಕರ್ಯ ಇರುವ BIET ಕಾಲೇಜ್ ರೋಡ್ , ದವನ್ ಕಾಲೇಜ್ ಹತ್ತಿರ, ದಾವಣಗೆರೆ.
94484 42694
99725 35329

**ಹೈಟೆಕ್ ವಯೋವೃದ್ದರ ಆರೈಕ ಕೇಂದ್ರ**
ನಮ್ಮಲ್ಲಿ ಪಾರ್ಶ್ವವಾಯು, ವೃದ್ದರು, ಕೈ ಕಾಲು ಸ್ವಾಧೀನ ಇಲ್ಲದವರು, ಮಾನಸಿಕರನ್ನು ನಮ್ಮಲಿ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು. ದಾವಣಗೆರೆ
89711 92936
76250 15036

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ
ವಧು-ವರರ ಕೇಂದ್ರ,
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

# ಬಾಪೂಜಿ ಆಸ್ಪತ್ರೆಯಲ್ಲಿ ಡಯಾಬಿಟೀಸ್ ನ್ಯೂರೋಪತಿ ಕೇಂದ್ರ

ದಾವಣಗೆರೆ, ನ.12- ನಗರದ ಜೆ.ಜೆ.ಎಂ ವೈದ್ಯಕೀಯ ಮಹಾವಿದ್ಯಾಲಯದ ಛೇರ್‌ಮನ್ ಡಾ. ಶಾಮನೂರು ಶಿವಶಂಕರಪ್ಪ, ಬಾಪೂಜಿ ಆಸ್ಪತ್ರೆಯ ಛೇರ್‌ಮನ್ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಜನಪರ ಕಾಳಜಿಯಿಂದ ಬಾಪೂಜಿ ಆಸ್ಪತ್ರೆಯಲ್ಲಿ ಡಯಾಬಿಟೀಸ್ ನ್ಯೂರೋಪತಿ ಕೇಂದ್ರವನ್ನು ಇಂದು ಆರಂಭಿಸಲಾಯಿತು.

ಜೆ ಜೆ ಎಂ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ಹಾಗೂ ಬಾಪೂಜಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಡಿ.ಎಸ್. ಕುಮಾರ್ ಅವರುಗಳು ಈ ಕೇಂದ್ರವನ್ನು ಉದ್ಘಾಟಿಸಿದರು.

ಮಧುಮೇಹ ನರರೋಗವು ಸಕ್ಕರೆ ಕಾಯಿಲೆಯ ಒಂದು ತೊಡಕಾಗಿದ್ದು ಮೊದಲು ಪಾದದ ಉರಿ, ನೋವು ಮತ್ತು ಸ್ಪರ್ಶ ಕಡಿಮೆಯಾಗಿ ಕಾಣಿಸಿಕೊಳ್ಳುತ್ತದೆ. ಈ ರೀತಿ ನರಗಳ ದೌರ್ಬಲ್ಯದಿಂದ ಗ್ಯಾಂಗ್ರೀನ್ ಮತ್ತು ಮಧುಮೇಹದ ಅಲ್ಸರ್ ಕಾಣಿಸಿಕೊಳ್ಳುತ್ತದೆ.



ಈ ರೀತಿ ಆಗುವುದರಿಂದ ಕಾಲುಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಮುಂದೆ ಆಗುವ ಅನಾಹುತಗಳನ್ನು ಮೊದಲೇ ತಿಳಿದು ಸೂಕ್ತ ಚಿಕಿತ್ಸೆ ತೆಗೆದುಕೊಳ್ಳುವುದೊಂದೇ ಇದಕ್ಕೆ ಪರಿಹಾರ. ಮಧುಮೇಹ ನರರೋಗ ತಿಳಿದುಕೊಳ್ಳಲು ನ್ಯೂರೋಟಚ್ ಟೆಸ್ಟ್ ಸಹಾಯ ಮಾಡುತ್ತದೆ. ಇದರಿಂದ ನಿಮ್ಮ ಪಾದಗಳು ಯಾವ ಪ್ರಮಾಣದಲ್ಲಿ ನರರೋಗಕ್ಕೆ ತುತ್ತಾಗಿವೆ ಎಂದು ತಿಳಿದುಕೊಳ್ಳಬಹುದು ಮತ್ತು ಅದಕ್ಕೆ ತಕ್ಕಂತೆ ಸೂಕ್ತ ಚಿಕಿತ್ಸೆಯನ್ನು ತೆಗೆದುಕೊಂಡು ಮುಂದೆ ಆಗುವ ಅನಾಹುತಗಳನ್ನು ತಡೆಗಟ್ಟಬಹುದಾಗಿದೆ. ಇಂತಹ ಡಯಾಬಿಟಿಸ್ ನ್ಯೂರೋಪತಿ ಕೇಂದ್ರ ಬಾಪೂಜಿ ಆಸ್ಪತ್ರೆಯಲ್ಲಿ ಪ್ರಾರಂಭವಾಗಿದ್ದು, ಕಾಲೇಜಿನ ಸಮುದಾಯ ಆರೋಗ್ಯ ವಿಭಾಗ ಹಾಗೂ ಮೆಡಿಸಿನ್ ವಿಭಾಗದ ನೇತೃತ್ವದಲ್ಲಿ ಈ ಕೇಂದ್ರ ಕಾರ್ಯ ನಿರ್ವಹಿಸಲಿದೆ.

ದಾವಣಗೆರೆ ಹಾಗೂ ಸುತ್ತಮುತ್ತಲಿನ ಜನರಿಗೆ ಇದು ತುಂಬಾ ಅನುಕೂಲವಾಗಲಿದೆ. ಇದರ ಸದುಪಯೋಗವನ್ನು ಜನರು ಪಡೆದುಕೊಳ್ಳಬೇಕು ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ಹೇಳಿದರು.

ಇದೇ ಸಂದರ್ಭದಲ್ಲಿ ಯೋಸ್ತ್ರ ಲಾಬ್‌ನ ಎನ್. ವಿನಾಯಕ ಅವರು ಈ ಒಂದು ಸಾಧನ ಉಪಯೋಗಿಸುವುದನ್ನು ಪ್ರಾತ್ಯಕ್ಷಿಕೆ ನೀಡಿ, ಅದನ್ನು ಬಳಸುವ ವಿಧಾನವನ್ನು ತೋರಿಸಿಕೊಟ್ಟರು.

ಈ ಸಂದರ್ಭದಲ್ಲಿ ಸಮುದಾಯ ಆರೋಗ್ಯ ವಿಭಾಗ ಹಾಗೂ ಮೆಡಿಸಿನ್ ವಿಭಾಗದ ವೈದ್ಯರು, ಸಿಬ್ಬಂದಿ ವರ್ಗದವರೊಂದಿಗೆ ಎಲ್ಲಾ ವಿಭಾಗದ ವೈದ್ಯರು ಉಪಸ್ಥಿತರಿದ್ದರು.

## ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಕನ್ನಡ ಸಾಹಿತ್ಯಕ್ಕೆ ಪ್ರೇರಣೆಯಾದ ಶಾಸನಗಳು' ವಿಷಯ ಕುರಿತು ದಾವಣಗೆರೆ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಡಾ. ವಿ. ಜಯರಾಮಯ್ಯ ಅವರು ಮಾಹಿತಿ ಒದಗಿಸಲಿದ್ದಾರೆ.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ನೋಂದಣಿ ಶುಲ್ಕಕ್ಕೆ ವಿನಾಯಿತಿ

(1ನೇ ಪುಟದಿಂದ) ಸಹಯೋಗ ದೊಂದಿಗೆ ರಾಜ್ಯದ ಮಾಹಿತಿ ತಂತ್ರಜ್ಞಾನ ಇಲಾಖೆ ಸ್ಥಾಪನೆ ಮಾಡಲು ಸಭೆ ಒಪ್ಪಿದೆ.

ನಿರ್ಭಯ ಯೋಜನೆ ಜಾರಿಗೊಳಿಸಲು ಸಂಪುಟ ಸಮ್ಮತಿಸಿದ್ದು, ಇದ ಕ್ಕಾಗಿ ಕೇಂದ್ರ ಸರ್ಕಾರ 56 ಕೋಟಿ ರೂ., ಅನುದಾನದಲ್ಲಿ 46 ಕೋಟಿ ರೂ. ಬಳಕೆ ಮಾಡಿಕೊಂಡು, 3 ಸಾವಿರ ಮಹಿಳಾ ಸಿಬ್ಬಂದಿಗೆ ಮೊಬೈಲ್ ಆಪ್ ಡೆವಲಪ್ ತರಬೇತಿ ನೀಡಲು ಸಭೆ ಸಮ್ಮತಿಸಿದೆ ಎಂದರು. ಬೆಂಗಳೂರು ಉಪನಗರ ರೈಲ್ವೆ ಯೋಜನೆಗೆ 15,757 ಕೋಟಿ ರೂ. ಪರಿಷ್ಕೃತ ಅಂದಾಜಿಗೆ ಒಪ್ಪಿಗೆ ನೀಡಲಾಗಿದೆ. ಇದರಿಂದ ಬೆಂಗಳೂರು ನಗರದ ಹೊರವಲಯ ಮತ್ತು ಬೆಂಗಳೂರು ಮಧ್ಯಭಾಗವನ್ನು ತಲುಪಲು ಯೋಜನೆ ಸಹಕಾರಿಯಾಗಲಿದೆ ಎಂದರು.

ಶಾಲಾ, ಕಾಲೇಜುಗಳನ್ನು ಆರಂಭಿಸುವ ಸಂಬಂಧ ಇಂದಿನ ಸಂಪುಟ ಸಭೆಯಲ್ಲಿ ಯಾವುದೇ ತೀರ್ಮಾನವನ್ನು ಕೈಗೊಂಡಿಲ್ಲವೆಂದು ಮಾಧುಸ್ವಾಮಿ ಇದೇ ಸಂದರ್ಭದಲ್ಲಿ ತಿಳಿಸಿದರು.


ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಅಂಡ್ ಹಾಸ್ಪಿಟಲ್

ಸಕ್ಕರೆ ಕಾಯಿಲೆ ತಪಾಸಣೆ ಹಾಗೂ ಸಂಶೋಧನಾ ಕೇಂದ್ರ

2ನೇ ಮುಖ್ಯರಸ್ತೆ, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002.

36ನೇ ವಿಶ್ವ ಮಧುಮೇಹ ದಿನಾಚರಣೆ -2020

ಸಕ್ಕರೆ ಕಾಯಿಲೆ ಮತ್ತು ಶುಶ್ರೂಷಕರು

ದಿನಾಂಕ 14.11.2020, ಬೆಳಿಗ್ಗೆ 11 ರಿಂದ 1 ರವರೆಗೆ

Virtual Live Meeting :

https://www.facebook.com/alurhospital

https://youtu.be/hlYSoU8VN9M

facebook link youtube link



ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲಾ ಅಸೋಸಿಯೇಷನ್,

ಪೂನಾ - ಬೆಂಗಳೂರು ರಸ್ತೆ, ದಾವಣಗೆರೆ-577002.

ಮಳಿಗೆಗಳು ಬಾಡಿಗೆಗೆ

ಹದಡಿ ರಸ್ತೆಯ ನಮ್ಮ ಧರ್ಮಶಾಲೆಯ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಮಳಿಗೆಗಳಲ್ಲಿ 3 (ಮೂರು) ಮಳಿಗೆಗಳು ಬಾಡಿಗೆಗೆ ದೊರೆಯುತ್ತದೆ. ಆಸಕ್ತರು ಧರ್ಮಶಾಲೆಯ "ಹನುಮಂತಪ್ಪನವರ ಕಟ್ಟಡ" ದಲ್ಲಿರುವ ಆಡಳಿತ ಕಛೇರಿಯನ್ನು ಸಂಪರ್ಕಿಸಿ.

ದೂರವಾಣಿ ಸಂಖ್ಯೆ : (08192) 258834/258836


## ನಂಬಿಕೆಯ ಭಕುತಿ

ಬಾಳ ಪಯಣದ ಹಾದಿಯಲಿ
ಮಾನವಗೆ ನಂಬಿಕೆಯ ಬಲವೇ
ಪರಮ ಬಲ !

ಜೀವಮಾನದ ಕಷ್ಟಗಳ ಪರಿಹರಿಸಿ
ಬಾಳ ಬೆಳಕಿಗೆ ದಾರಿತೋರಿ
ಭಕ್ತಿಯ ಪರಿಗಣಿಸಿ
ಶಕ್ತಿಯನ್ನು ನೀಡುವುದು
ಮುನ್ನಡೆಸುತ್ತಿರುವುದು ನಂಬಿಕೆಯು
ಅದುವೇ ಪರಮ ಬಲ !

ಬಾಳಿನ ಉಸಿರಾಗಿ ಹಸಿರಾಗಿ
ಬಾಳ ಜ್ಯೋತಿಯ ಬೆಳಗುವುದು
ಜ್ಞಾನ ಕ್ಷಿತಿಜ ವಿಸ್ತರಿಸುವುದು
ಹೃದಯ ಸಿರಿ ಸಂಭ್ರಮಿಸುವುದು
ನಂಬಿಕೆಯೇ ಇದಕ್ಕೆ ಪರಮ ಬಲ !

ಉತ್ತುಂಗ ಶಿಖರಕ್ಕೆ ಏರಿಸುವುದು
ಅಹಂಕಾರ ಅಳಿಯುವುದು
ಮಮಕಾರ ಬೆಳೆಯುವುದು
ಮಾಯಾಜಾಲವನು
ಭೇದಿಸುವುದು
ಮುಕುತಿಯ ನೀಡುವುದು ಭಕುತಿ
ನಂಬಿಕೆಯೇ ಕಾರಣವೂ
ದೇವನೊಲಿವುದಕೆ
ನಂಬಿಕೆಯೇ ಪರಮ ಬಲ
ಮಾನವಗೆ !

- ಜೆಂಬಿಗಿ ಮೃತ್ಯುಂಜಯ
ಕನ್ನಡ ಉಪನ್ಯಾಸಕರು
ದಾವಣಗೆರೆ

## ಪಟಾಕಿ ಮಳಿಗೆ ಉದ್ಘಾಟಿಸಿದ ಎಸ್ಸೆಸ್

(1ನೇ ಪುಟದಿಂದ) ತಂದು ಕೊಡುತ್ತದೋ ಗೊತ್ತಿಲ್ಲ. ಆದರೆ ಎಲ್ಲರಿಗೂ ಒಳಿತಾಗಲಿ ಎಂದು ಆಶಿಸಿದರು.

48 ಮಳಿಗೆಗಳಲ್ಲಿ ಪಟಾಕಿ ಮಾರಾಟ ಇಂದಿನಿಂದ ಆರಂಭವಾಗಿದೆ. ಉಪ ಪರಿಸರ ಅಧಿಕಾರಿ ಸಂತೋಷ್, ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ, ಸಂಘದ ಅಧ್ಯಕ್ಷ ಡಿ.ಎಸ್. ಸಿದ್ದಣ್ಣ, ಕಾರ್ಯದರ್ಶಿ ಡಿ.ಎನ್. ಶಿವಾನಂದ್, ವೀರೇಶ್, ಸಾಗರ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಗರ ಅಭಿವೃದ್ಧಿಗೆ 125 ಕೋಟಿ ರೂ.

(1ನೇ ಪುಟದಿಂದ) ಮಹಾಪೌರ ಅಜಯ್ ಕುಮಾರ್ 'ಜನತಾವಾಣಿ'ಗೆ ತಿಳಿಸಿದ್ದಾರೆ.

ಸಾರ್ವಜನಿಕರ ಸಮಸ್ಯೆಗಳಿಗೆ ತತ್ ಕ್ಷಣವೇ ಸ್ಪಂದಿಸುವ ನಿಟ್ಟಿನಲ್ಲಿ 'ಮನೆ ಬಾಗಿಲಿಗೆ ಮಹಾನಗರ ಪಾಲಿಕೆ' ಶೀರ್ಷಿಕೆಯಡಿಯ ವಿನೂತನ ಕಾರ್ಯಕ್ರಮವನ್ನು ತಾವು ನಡೆಸಲುದ್ದೇಶಿಸಿದ್ದು, ಈ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿಕೊಡುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಆಹ್ವಾನಿಸಲಾಗಿದೆ ಎಂದು ಅವರು ಹೇಳಿದರು.

ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪ್ರತಿ ವಾರ್ಡಿನ ಅಭಿವೃದ್ಧಿಗಾಗಿ ತಲಾ 1 ಕೋಟಿ ರೂ. ಗಳಂತೆ ಒಟ್ಟು ಎಲ್ಲಾ 45 ವಾರ್ಡುಗಳಿಗೂ ಅಗತ್ಯವಾಗಿರುವ 45 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಬಿಡುಗಡೆ ಮಾಡುವಂತೆ ತಾವು ಮಾಡಿಕೊಂಡ ಮನವಿಗೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಅಜಯ್ ಕುಮಾರ್ ವಿವರಿಸಿದ್ದಾರೆ.

125 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿರುವ ಮುಖ್ಯಮತ್ರಿ ಯಡಿಯೂರಪ್ಪ ಮತ್ತು ಅನುದಾನ ಬಿಡುಗಡೆ ಮಾಡಲು ಮುಖ್ಯಮಂತ್ರಿಗಳ ಮೇಲೆ ಒತ್ತಡ ತರುವುದರ ಮೂಲಕ ಸಹಕರಿಸಿದ ಸಂಸದ ಸಿದ್ದೇಶ್ವರ, ಹಿರಿಯ ಶಾಸಕ ರವೀಂದ್ರನಾಥ್, ಸಚಿವ ಭೈರತಿ ಬಸವರಾಜ್ ಅವರುಗಳಿಗೆ ಮೇಯರ್ ಅಜಯ್ ಕುಮಾರ್ ಕೃತಜ್ಞತೆ ಸಲ್ಲಿಸಿದ್ದಾರೆ.

ನಗರಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಎಸ್.ಟಿ. ವೀರೇಶ್, ಪ್ರಸನ್ನ ಕುಮಾರ್ ಅವರುಗಳಲ್ಲದೇ, ಸದಸ್ಯರು, ಆಯುಕ್ತ ವಿಶ್ವನಾಥ ಮುದಜ್ಜಿ ನಿಯೋಗದಲ್ಲಿದ್ದರು.

## ಎಸ್.ವಿ.ಆರ್.ಗೆ ಸಚಿವ ಸ್ಥಾನಕ್ಕೆ ಆಗ್ರಹ

ದಾವಣಗೆರೆ, ನ.12- ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಚಿವ ಸಂಪುಟದಲ್ಲಿ ಶಾಸಕ ಎಸ್.ವಿ. ರಾಮಚಂದ್ರಪ್ಪ ಅವರಿಗೆ ಸಚಿವ ಸ್ಥಾನ ನೀಡಲು ವಾಲ್ಮೀಕಿ ನಾಯಕ ಸಮಾಜ ಆಗ್ರಹಿಸಿದೆ.

ರಾಮಚಂದ್ರಪ್ಪ ಅವರಿಗೆ ಜಿಲ್ಲಾ ಉಸ್ತುವಾರಿಯ ಜವಾಬ್ದಾರಿ ನೀಡಿ, ವಾಲ್ಮೀಕಿ ನಾಯಕ ಸಮುದಾಯಕ್ಕೆ ಸಾಮಾಜಿಕ ನ್ಯಾಯ ನೀಡಬೇಕು ಸಮಾಜದ ಅಧ್ಯಕ್ಷ ವೀರಣ್ಣ ಒತ್ತಾಯಿಸಿದರು.

ಸಮಾಜದ ಮುಖಂಡ ಎನ್.ಎಂ. ಆಂಜನೇಯ ಮಾತನಾಡಿ, ಜಿಲ್ಲೆಯಲ್ಲಿ ವಾಲ್ಮೀಕಿ ನಾಯಕ ಸಮುದಾಯ ದವರು 3 ಲಕ್ಷ ಮತದಾರರಿದ್ದರೂ ಈವರೆಗೂ ಒಮ್ಮೆಯೂ ಸಚಿವ ಸ್ಥಾನ ನೀಡದಿರುವುದು ನೋವಿನ ಸಂಗತಿ ಎಂದರು.

ಸಮಾಜದ ಮುಖಂಡರಾದ ಐಗೂರು ಹನುಮಂತಪ್ಪ, ಚೇತನ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಇಂದು ಧನ್ವಂತರಿ ಹೋಮ

ಅನ್ವಯ ಆಯುರ್ವೇದ ಆಸ್ಪತ್ರೆ ವತಿಯಿಂದ ಧನ್ವಂತರಿ ಜಯಂತಿ ಮತ್ತು ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ ಧನ್ವಂತರಿ ಹೋಮ ಕಾರ್ಯಕ್ರಮವು ಇಂದು ಬೆಳಿಗ್ಗೆ 8 ಗಂಟೆಗೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 86186-42929.

## ವಿಕಲಚೇತನರಿಗೆ ಸೌಲಭ್ಯಗಳ ಜಾಗೃತಿ



ದಾವಣಗೆರೆ, ನ.12- ವಿಕಲಚೇತನರ ಗುರುತಿನ ಚೀಟಿ ಮತ್ತು ವಿಕಲಚೇತನರಿಗೆ ಇರುವ ಸರ್ಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸಂಕಲ್ಪ ಸಂಸ್ಥೆ ವತಿಯಿಂದ ನಗರದ ಮಹಾರಾಜಪೇಟೆಯ ಶ್ರೀ ವಿಠಲ ಮಂದಿರದಲ್ಲಿ ಇಂದು ನಡೆಸಲಾಯಿತು. ಸಂಕಲ್ಪ ಸಂಸ್ಥೆಯ ಕಾರ್ಯದರ್ಶಿ ಜೆ. ಸುರೇಶ್, ಶಶಾಂಕ್ ಮಾತನಾಡಿದರು. ವಿಠಲ ಮಂದಿರದ ಮ್ಯಾನೇಜರ್ ಪ್ರಭಾಕರ್ ಭಾಗವಹಿಸಿದ್ದರು. ಹರೀಶ್ ವಂದಿಸಿದರು.

## ಯೋಗಾಸನ ಶಿಬಿರಕ್ಕೆ ಆಹ್ವಾನ

ದಾವಣಗೆರೆ, ನ. 12- ನಗರದ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ 21 ದಿನಗಳ ವಿಶೇಷ ಆನ್‌ಲೈನ್ ಯೋಗಾಸನ ಶಿಬಿರ ನಡೆಯಲಿದೆ. ಆಸಕ್ತರು http://forms.gle/fSz1j2KE69Rvzr6h9 ಈ ಲಿಂಕ್ ಬಳಸಿ, ಇದೇ ದಿನಾಂಕ 17 ರೊಳಗೆ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 9480065558, 9481359152.

## ಕೊಲೆ ಆರೋಪಿಗಳಿಗೆ ಶಿಕ್ಷೆಗೆ ಆಗ್ರಹ



**ಗೋಂಧಳಿ ಸಮಾಜದ ಸುರೇಶ್ ವಾಸ್ಪರ್ ಜೋಷಿ ಕೊಲೆ ಪ್ರಕರಣ**

ದಾವಣಗೆರೆ, ನ.12- ಕೊಲೆ ಅಪರಾಧಿಗಳಿಗೆ ಕಠಿಣ ಶಿಕ್ಷೆ ಮತ್ತು ಮೃತನ ಕುಟುಂಬಕ್ಕೆ ಆರ್ಥಿಕ ಸಹಾಯ ನೀಡಬೇಕೆಂದು ಒತ್ತಾಯಿಸಿ ಅಖಂಡ ಕರ್ನಾಟಕ ಗೋಂಧಳಿ ಸಮಾಜ ಸಂಘದ ತಾಲ್ಲೂಕು ಘಟಕವು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಇಂದು ಮನವಿ ಸಲ್ಲಿಸಿತು.

ಕಲ್ಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಹಲಕರ್ಟಿ ಗ್ರಾಮದಲ್ಲಿ ಗೋಂಧಳಿ ಸಮಾಜದ ಸುರೇಶ್ ವಾಸ್ಪರ್ ಜೋಷಿ ಅವರನ್ನು ಕೊಲೆ ಮಾಡಿರುವ ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡಬೇಕು, ಮೃತನ ಕುಟುಂಬಕ್ಕೆ ಆರ್ಥಿಕ ಸಹಾಯ ನೀಡುವ ಜೊತೆಗೆ ಗೋಂಧಳಿ ಸಮುದಾಯದ ರಕ್ಷಣೆಗೆ ಮುಂದಾಗಬೇಕು ಎಂದು ಸಮಿತಿ ಅಧ್ಯಕ್ಷ ನರಸಿಂಗ ರಾವ್ ಜೋಷಿ ವಾಗ್ಮೋಡೆ ಆಗ್ರಹಿಸಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಪರಶುರಾಮ ಗೌಡ್ರು ಗಣಾಚಾರಿ, ಮಂಜುನಾಥ್ ಭಗವತ್, ಚೌಡಪ್ಪ ಲಗವೆ, ವೀರೇಶ್ ರಾವ್ ಪಾಚಿಂಗೆ, ನರೇಂದ್ರ ನವಲೆ, ಪ್ರಭಾಕರ್ ನವಲೆ, ರಾಮಕೃಷ್ಣ ನವಲೆ, ಹನುಮಂತಪ್ಪ ಗಣಾಚಾರಿ, ಯಲ್ಲಪ್ಪ ವಾಗ್ಮೋಡೆ, ಮಂಜುನಾಥ್ ಗುರು, ಅಶೋಕ ಪಾಚಿಂಗೆ, ಪ್ರಕಾಶ್ ರಾಜ್ ಶಿಂಧೆ ಬಳ್ಳಾರಿ, ವಿಠಲರಾವ್ ವಾಗ್ಮೋಡೆ ಮತಿತ್ತರರು ಉಪಸ್ಥಿತರಿದ್ದರು

## ಬಿ.ಎಂ. ಸಂತೋಷ್‌ಗೆ ಪಿಎಚ್‌ಡಿ



ದಾವಣಗೆರೆ, ನ.12- ನಗರದ ಜಿಎಂಐಟಿ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಬಿ.ಎಂ. ಸಂತೋಷ್ ಅವರು ಮಂಡಿಸಿದ ಮಹಾಪ್ರಬಂಧಕ್ಕೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಪಿ.ಎಚ್.ಡಿ ಪದವಿ ನೀಡಿದೆ.

ಸ್ಥಳೀಯ ಯುಬಿಡಿಟಿ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಪ್ರಾಧ್ಯಾಪಕ ಡಾ. ಎಸ್. ಮಂಜಪ್ಪ ಅವರ ಮಾರ್ಗದರ್ಶನದಲ್ಲಿ 'ಎಲೆಕ್ಟ್ರೋ ಕೆಮಿಕಲ್ ಇನ್ವೆಸ್ಟಿಗೇಶನ್ ಆನ್ ಸಮ್ ಬಯೋ ಆಕ್ಟೀವ್ ಕಾಂಪೌಂಡ್ಸ್ ಆಫ್ ಫಾರ್ಮಾಸ್ಯೂಟಿಕಲ್ ಇಂಪಾರ್ಟೆನ್ಸ್ ಆಟ್ ಮಾಡಿಫೈಡ್ ಎಲೆಕ್ಟ್ರೋಡ್' ಎಂಬ ಮಹಾಪ್ರಬಂಧವನ್ನು ಸಂತೋಷ್ ಮಂಡಿಸಿದ್ದರು. ಸಂತೋಷ್, ನಗರದ ನಿವೃತ್ತ ಶಿಕ್ಷಕ ಬಿ.ಎಂ.ಉಮಾಪತಿ ಮತ್ತು ಎಂ. ರುದ್ರಮ್ಮ ದಂಪತಿ ಪುತ್ರ.

## ಹರಿಹರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಾಯಿಬಾಬಾ ದೇವಸ್ಥಾನ, ಕೇಶವನಗರ, ಪಾಟೀಲ್ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


ಆಶ್ರಯ ಆಸ್ಪತ್ರೆ

ಡಾ. ದಿನೇಶ್. ಎಂ. ಜಿ,

M.S, M.ch, F.M.A.S, F.M.A.O.

ಬಿ. ಜಿ. ಎಸ್ ಗ್ಲೋಬಲ್ ಆಸ್ಪತ್ರೆಯ ಖ್ಯಾತ ವೈದ್ಯರು,
ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು ಮತ್ತು ಉದರ ದರ್ಶಕ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು

ಇವರು ಪ್ರತಿ ತಿಂಗಳು ಎರಡನೇ ಮತ್ತು ನಾಲ್ಕನೇ ಶನಿವಾರ ದಾವಣಗೆರೆಯ ಆಶ್ರಯ ಆಸ್ಪತ್ರೆಯಲ್ಲಿ ಲಭ್ಯವಿರುತ್ತಾರೆ.

ನೋಂದಣಿಗಾಗಿ ಕರೆ ಮಾಡಿ

08192 224679

ಸಮಯ -ಬೆಳಿಗ್ಗೆ-11 ಗಂಟೆಯಿಂದ ಮಧ್ಯಾಹ್ನ -2.30 ಗಂಟೆಯವರೆಗೆ



ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಪಿ.ಜಿ. ಸೆಂಟರ್ ಆಸ್ಪತ್ರೆ

# 405/1, ಬಾತಿಕೆರೆ ಎದುರು, ಅಶ್ವಿನಿ ನಗರ, ಪಿ.ಬಿ. ರಸ್ತೆ, ದಾವಣಗೆರೆ.

ಮೊ. : 87620 45831

ರಾಷ್ಟ್ರೀಯ ಆಯುರ್ವೇದ ದಿನಾಚರಣೆ-2020 ಪ್ರಯುಕ್ತ

ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ

ದಿನಾಂಕ 13-11-2020ರಂದು ಧನ್ವಂತರಿ ಜಯಂತಿ ಪ್ರಯುಕ್ತ ಎಲ್ಲಾ ರೋಗಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ಕೋರಲಾಗಿದೆ.

(ಮೊದಲು ಬಂದ 20 ರೋಗಿಗಳಿಗೆ ರಿಯಾಯಿತಿ ದರದಲ್ಲಿ ಪಂಚಕರ್ಮ ಚಿಕಿತ್ಸೆ ನೀಡಲಾಗುವುದು)

ಸಮಯ : ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ
ಮಧ್ಯಾಹ್ನ 2 ಗಂಟೆಯಿಂದ ಸಂಜೆ 4 ಗಂಟೆಯವರೆಗೆ

ಸ್ಥಳ : ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಪಿ.ಜಿ. ಸೆಂಟರ್ ಆಸ್ಪತ್ರೆ



ASHWINI AYURVEDIC MEDICAL COLLEGE & P.G. CENTRE

#405/1,OPP. BATHI LAKE, ASHWINI NAGAR, P.B ROAD. DAVANAGERE

WANTED

| | Department | Prof. | Asst. Prof. | Lecturer |
|---|---|---|---|---|
| 1. | Shalya Tantra M.S. | 1 | 1 | |
| 2. | Kriya Shareera M.D. | | | |
| 3. | Dravya Guna M.D. | | 1 | 1 |
| 4. | Swasthavritta Vigyan M.D. | 1 | | 1 |
| 5. | Prasuthi Tantra & Sthree Rog | 1 | | 1 |
| 6. | Panchakarma | | 1 | 1 |
| 7. | Rognidan | | 1 | 1 |
| 8. | Rasa Shastra & bhyshajya | | 1 | 1 |

Dr. Hiremath, Mob. : 94498 23088


IN THE COURT OF HON'BLE PRL. DISTRICT AND SESSIONS JUDEGE AT DAVANAGERE

P& SC NO .08/2020

Petitioner : Smt Bhagyamma And Another V/S Respondents : Nil

CITATION

Whereas the Petitioners have filed the bove petition for issue of probate/Succession certificate in favour of the petitioner's in respect of the will dated: 03.09.2015 excuted by the deceased **Basavarajappa @ Gowdra Basavarajappa** in respect of the schedule properties. now the above petition is posted to **18.12.2020** anyone having any sort of claim or objections for issue of the Probate/Succession certificate in favour of the petitioners may appear on **18.12.2020** at **11.AM** either personally or through an advocte and contest the petition, failing which all further proceedings will take place in accordance with law.

SCHEDULE

**1.** Land bearing Sy.No. 79/2 measuring 00 Acers 03 guntas and a black tiled house measuring 8.70 x6.00 meter built in the same sy. No situated at Chikkatogaleri village, Mayakonda hobli, Davanagere taluk and district and bounded by
**East-** Property of Rudriah **West-** Property of puttappa
**North -** Property of Rudramuni **South -** Property of siddappa

**2.** Land (Khana) bearing Sy.No.68/1p4 Measuring 00 Acres 03 guntas situated at Chikkatogaleri village mayakonda hobli, Davanagere taluk and distric and bounded by
**East-** Property of siddappa **West-** Property of Ramappa
**North -** Property of Puttappa **South -** Property of siddappa

**3.** Land Bering Sy.No.70/1p2 Measuring 00 Acres 35 guntas Situated at Chikkatogaleri Village, Mayakond hobli, Davanagere Taluk and district and bounded by
**East-** Land of Dodda Basajjara Maheshwarappa **West-** Igala Land
**North -** Land of Gurushantappa **South -** Land of Chowdki Kenchappa

**4.** Land bearing Sy.No.68/2 measuring 02 Acres 00 guntas situated at Chikkatogaleri village, Mayakonda hobli, Davanagere taluk and district and bounded by
**East-** Land of siddabasappa **West -** Land of Shanmukappa
**North -**Land of Halappa **South -** Road

Given under my hand and seal on 12.11.2020 Day of October 2020 at Davanagere.

K.B. Shivakumar
Advocate for Petitioner's, Davanagere

By order of the Court
Chief Ministerial Officer
Prl. District and Sessions Judge, Davanagre

Date : 03.10.2020 Place : Davanagere


ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು

ಹಸಿರು ಪಟಾಕಿಗಳ ಮಾರಾಟ!

* ಹೋಲ್‌ಸೇಲ್ ದರದಲ್ಲಿ ಮಾರಾಟ * 500 ರೂ. ಮೇಲ್ಪಟ್ಟ ಖರೀದಿಗೆ ಮಾತ್ರ ಅವಕಾಶ
* ಪ್ಯಾಕೆಟ್‌ಗಳ ಸೇಲ್ ಮಾತ್ರ, ಲೂಸ್ ಕೊಡುವುದಿಲ್ಲ
* ಕೋವಿಡ್ ಇರುವುದರಿಂದ ಮಾಸ್ಕ್ ಕಡ್ಡಾಯ
* ಬೆಳಿಗ್ಗೆ 9 ರಿಂದ ರಾತ್ರಿ 9 ವರೆಗೆ ಮಾರಾಟ

ಇಂದು ಕೊನೆಯ ದಿನ

ದಿನಾಂಕ 13.11.2020 ರ ವರೆಗೆ ಮಾತ್ರ ಮಾರಾಟ

ಜನಸಂದಣಿ ತಪ್ಪಿಸಲು ಈ ಬಾರಿ ಎಂ.ಜಿ. ರಸ್ತೆಯ ಅಂಗಡಿ ಜೊತೆಗೆ ಕುಂದುವಾಡ ರಸ್ತೆ, ಸಾಯಿ ಇಂಟರ್ ನ್ಯಾಶನಲ್ ಹೋಟೆಲ್ ಹಿಂಭಾಗ ನಮ್ಮ ಗೋಡೌನ್‌ನಲ್ಲೂ ಮಾರಾಟ ಮಾಡಲಾಗುವುದು.

ಹೂವಿನ ಕುಡಿಕೆ, ಚಕ್ರ, ಬೋರಸಾ, ಸರಗಳು, ಹೊಸ ಹೊಸ ತರಹದ 7 ಶಾಟ್, 12 ಶಾಟ್, 25 ಶಾಟ್, 50 ಶಾಟ್, 60 ಶಾಟ್, 100 ಶಾಟ್, 120 ಶಾಟ್, 240 ಶಾಟ್, ಸೇರಿದಂತೆ ಇನ್ನೂ ಇತರೆ ರಂಗುರಂಗಿನ ಪಟಾಕಿಗಳು ಸಿದ್ಧ ದಾಸ್ತಾನಿನಲ್ಲಿ ಸಿಗುತ್ತದೆ. ಗಿಫ್ಟ್ 250, 300, 350, 500, 675, 900 ದರದಲ್ಲಿ ದೊರೆಯುತ್ತದೆ.

ಭವಾನಿ ಬುಕ್ ಡಿಪೋ
ಕಿರಣ್, ಆಶಾ ಜನರಲ್ ಸ್ಟೋರ್
ಎಂ.ಜಿ. ರಸ್ತೆ, ದಾವಣಗೆರೆ.
ಕುಂದುವಾಡ ರಸ್ತೆ, ಸಾಯಿ ಇಂಟರ್ ನ್ಯಾಶನಲ್ ಹಿಂಭಾಗ, ದಾವಣಗೆರೆ.
ಫೋನ್ ನಂ.: 9449820236, 9844303551, 9620669555, 9448115270


ಶಿವ ಸಹಕಾರಿ ಬ್ಯಾಂಕ್ ನಿಯಮಿತ.,

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.
ಫೋ. : 08192 -256107 ಮೊ. : 94498 19322, 99644 34634, 94804 47320

### ಮಾನ್ಯ ಸದಸ್ಯರುಗಳ ಗಮನಕ್ಕೆ

ಕೋವಿಡ್-19 ವೈರಸ್ ಮಹಾಮಾರಿ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಇ43ಸಿ.ಎಲ್.ಎಂ. 2020 (ಇ), ಬೆಂಗಳೂರು, ದಿನಾಂಕ : 21.10.2020ರನ್ವಯ, ಮುಖ್ಯವಾಗಿ ಬ್ಯಾಂಕಿನ ಸರ್ವ ಸದಸ್ಯರ ಸುರಕ್ಷತೆಯನ್ನು ಕಾಪಾಡುವ ಉದ್ದೇಶದಿಂದ ದಿನಾಂಕ : 28.10.2020 ರಂದು ನಡೆದ ಆಡಳಿತ ಮಂಡಲಿ ಸಭೆಯಲ್ಲಿ ವಾರ್ಷಿಕ ಮಹಾಸಭೆಯನ್ನು "ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್" ಮೂಲಕ ದಿನಾಂಕ : 13.12.2020ರ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ನಡೆಸಲು ತೀರ್ಮಾನಿಸಿರುತ್ತದೆ. ಆದ್ದರಿಂದ ಮಾನ್ಯ ಸದಸ್ಯರುಗಳು ತಮ್ಮ ಹತ್ತಿರದ ಶಾಖೆಗೆ ಕೂಡಲೇ ಭೇಟಿ ನೀಡಿ, ತಮ್ಮ ಮೊಬೈಲ್ ಸಂಖ್ಯೆಯನ್ನು Update ಮಾಡಿಸಿದ್ದಲ್ಲಿ ತಮ್ಮ ಮೊಬೈಲ್‌ಗೆ ವಾಟ್ಸಾಪ್ ಮತ್ತು ಎಸ್.ಎಂ.ಎಸ್. ಮೂಲಕ ಲಿಂಕ್ ಕಳುಹಿಸಲಾಗುವುದು. ಈ ಲಿಂಕ್ ಮೂಲಕ ತಾವುಗಳು ವಾರ್ಷಿಕ ಮಹಾಸಭೆಯಲ್ಲಿ "ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್' ಮೂಲಕ ಭಾಗವಹಿಸಲು ವಿನಂತಿಸಲಾಗಿದೆ.

ಮಾನ್ಯ ಸದಸ್ಯರುಗಳು ಯಾವುದೇ ವಿಷಯದ ಬಗ್ಗೆ ತಾವು ನೀಡಲುದ್ದೇಶಿಸಿರುವ ಸಲಹೆ, ಸೂಚನೆ, ಮಾರ್ಗದರ್ಶನವನ್ನು ವಿಡಿಯೋ ಕಾನ್ಫರೆನ್ಸ್/ವೆಬ್ ಕಾಸ್ಟ್" ನಡೆಯುವ ದಿನಾಂಕಕ್ಕಿಂತ ಐದು ದಿವಸ ಮುಂಚಿತವಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸಬೇಕು. ಇಲ್ಲಿ ನಿಗದಿಪಡಿಸಿಸಿದ ವಿಷಯವನ್ನು ಮಾತ್ರ "ವಿಡಿಯೋ ಕಾನ್ಫರೆನ್ಸ್/ವೆಬ್ ಕಾಸ್ಟ್"ನಲ್ಲಿ ತಾವು ನೋಂದಾಯಿಸಿದ ಮೊಬೈಲ್ ಮೂಲಕ ಚರ್ಚಿಸಬಹುದಾಗಿದೆ.

ಆಡಳಿತ ಮಂಡಳಿ ಪರವಾಗಿ

ಸಹಿ/- ಎಂ.ಬಿ. ಸಂಗಮೇಶ್ವರಗೌಡರು
ಅಧ್ಯಕ್ಷರು

ಸಹಿ/- ಐಗೂರು ಸಿ. ಚಂದ್ರಶೇಖರ್
ಉಪಾಧ್ಯಕ್ಷರು

ಶಿವ ಸಹಕಾರಿ ಬ್ಯಾಂಕ್ ನಿಯಮಿತ.,

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.
ಫೋ. : 08192 -256107

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002

### ಕಬ್ಜೆ ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಈ ಕೆಳಗೆ ರುಜು ಮಾಡಿರುವ ಶ್ರೀ ಎ.ಆರ್. ಸಿದ್ದರಾಮಪ್ಪ, ಪ್ರಧಾನ ವ್ಯವಸ್ಥಾಪಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಬ್ಯಾಂಕಿನ ಅಧಿಕೃತ ಅಧಿಕಾರಿಯಾದ ನಾನು, ಸೆಕ್ಯುರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಎರಡನೇ) ಆಧ್ಯಾದೇಶ 2002 (ಆಧ್ಯಾದೇಶ 2002ರ 3) ಕಲಂ 13(12) ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 9ರ ಅಂತರ್ಗತವಾಗಿ ನನ್ನ ಅಧಿಕಾರವನ್ನು ಉಪಯೋಗಿಸಿ ಶ್ರೀ ಬಸವರೆಡ್ಡಿ ಆರ್. ಬಿನ್ ಹನುಮಂತಪ್ಪ ಆರ್., #1821/87, ವಿನಾಯಕ ನಗರ, ಸಂವೇದಿ ಸ್ಕೂಲ್ ಹತ್ತಿರ, ನಿಟುವಳ್ಳಿ, ದಾವಣಗೆರೆ. ಇವರಿಂದ ಬ್ಯಾಂಕಿಗೆ ಸಲ್ಲಬೇಕಾದ ಬಾಕಿ ಮೊಬಲಗು ರೂ. 61,32,258-61 (ರೂ. ಅರವತ್ತೊಂದು ಲಕ್ಷದ ಮೂವತ್ತೆರಡು ಸಾವಿರದ ಇನ್ನೂರ ಐವತ್ತೆಂಟು ಮತ್ತು ಅರವತ್ತೊಂದು ಪೈಸೆ ಮಾತ್ರ)ಗಳನ್ನು ಪಾವತಿಸುವಂತೆ 60 ದಿನಗಳ ಕಾನೂನು ಬದ್ಧ ತಗಾದೆಯನ್ನು ದಿನಾಂಕ : 07.03.2020 ರಂದು ಕೊಟ್ಟಿದ್ದರೂ ಕೂಡಾ ಈ ಅವಧಿ ಒಳಗೆ ಬಾಕಿದಾರ ಸಾಲಗಾರನು ಸಾಲವನ್ನು ಪಾವತಿಸಲು ವಿಫಲವಾದ ಪ್ರಯುಕ್ತ ಸದರಿ ಕಾನೂನಿನ 13 (4) ಮತ್ತು ಸದರಿ ಆಧ್ಯಾದೇಶದ ನಿಯಮ 9 ರಂತೆ ನಾನು ನನ್ನ ಅಧಿಕಾರವನ್ನು ಉಪಯೋಗಿಸಿ, ಈ ಕೆಳಗೆ ಕಂಡ ಸ್ಥಿರ ಆಸ್ತಿಗಳನ್ನು ಬ್ಯಾಂಕಿಗೆ ಬರಬೇಕಾದ ಸಾಲಕ್ಕಾಗಿ ದಿನಾಂಕ : 13.11.2020 ಈ ದಿನ ನನ್ನ ಕಬ್ಜೆಗೆ ವಹಿಸಿಕೊಂಡಿರುತ್ತೇನೆ ಎಂದು ಸಾಲಗಾರನಿಗೂ, ಸಾರ್ವಜನಿಕರಿಗೂ ಈ ನೋಟೀಸು ಮುಖೇನ ಗಮನ ತರುತ್ತಿದ್ದೇನೆ.

ಸಾಲಗಾರನು ಮತ್ತು ಸಾರ್ವಜನಿಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ಶಿವಕುಮಾರಸ್ವಾಮಿ ಬಡಾವಣೆ ಶಾಖೆ, ದಾವಣಗೆರೆ. ಬ್ಯಾಂಕಿಗೆ ಬರತಕ್ಕ ರೂ. 61,32,258-61 (ರೂ. ಅರವತ್ತೊಂದು ಲಕ್ಷದ ಮೂವತ್ತೆರಡು ಸಾವಿರದ ಇನ್ನೂರ ಐವತ್ತೆಂಟು ಮತ್ತು ಅರವತ್ತೊಂದು ಪೈಸೆ ಮಾತ್ರ) ಋಣ (ಚಾರ್ಜ್) ಮತ್ತು ದಿನಾಂಕ : 29.02.2020 ರಿಂದ ತಗಲುವ ಬಡ್ಡಿ ಸೇರಿಸಿ ಸಂದಾಯವಾಗುವ ತನಕ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ರೀತಿಯ ವ್ಯವಹಾರವನ್ನು ಮಾಡತಕ್ಕದ್ದಲ್ಲ ಎಂದು ಈ ಮೂಲಕ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ.

**ಸ್ಥಿರಾಸ್ತಿ ವಿವರಗಳು :** ಶ್ರೀ ಬಸವರೆಡ್ಡಿ ಆರ್. ಬಿನ್ ಹನುಮಂತಪ್ಪ ಆರ್. #1821/87, ವಿನಾಯಕ ನಗರ, ಸಂವೇದಿ ಸ್ಕೂಲ್ ಹತ್ತಿರ, ನಿಟುವಳ್ಳಿ, ದಾವಣಗೆರೆ. ಇವರಿಗೆ ಸಂಬಂಧಪಟ್ಟ ವಾಸೋಪಯೋಗಿ ಕಟ್ಟಡದಲ್ಲಿ ಕೆಳ ಅಂತಸ್ತು, ಒಂದನೇ ಮಹಡಿ ಮತ್ತು ಎರಡನೇ ಮಹಡಿಗಳು ಇದ್ದು ರಿ.ಸರ್ವೆ. ನಂ. 22/ಪಿ, ಸೈಟ್ ನಂ. 87,#1821/87, ಪೂರ್ವ ಪಶ್ಚಿಮ 30 ಅಡಿಗಳು ಮತ್ತು ಉತ್ತರ ದಕ್ಷಿಣ 50 ಅಡಿಗಳು =1500 ಚದರ ಅಡಿಗಳು ಇದ್ದು ಇದರ ಶಿವಚಿದಂಬರ ಲೇಔಟ್, ನಿಟುವಳ್ಳಿ, ದಾವಣಗೆರೆ. ಇಲ್ಲಿ ಇರುತ್ತದೆ ಮತ್ತು ಸದರಿ ಕಟ್ಟಡದ ವಿವರ ಈ ಕೆಳಕಂಡಂತೆ ಇರುತ್ತದೆ.

| ವಿವರಗಳು : | ಪ್ಲಿನ್ತ್ ಏರಿಯಾ ಚ. ಅಡಿಗಳಲ್ಲಿ |
|---|---|
| 1) ಕೆಳ ಅಂತಸ್ತು | 1300 |
| 2) ಮೊದಲನೇ ಮಹಡಿ | 1400 |
| 3) ಎರಡನೇ ಮಹಡಿ | 1400 |

**ಇದಕ್ಕೆ ಚಕ್ಕುಬಂದಿ :** ಪೂರ್ವಕ್ಕೆ : ಸೈಟ್ ನಂ. 88, ಪಶ್ಚಿಮಕ್ಕೆ : 30 ಅಡಿ ರಸ್ತೆ, ಉತ್ತರಕ್ಕೆ : ರಿ.ಸರ್ವೆ ನಂ. 21ರ ಜಮೀನು, ದಕ್ಷಿಣಕ್ಕೆ : 30 ಅಡಿ ರಸ್ತೆ.

**ದಾವಣಗೆರೆ.**
**ದಿನಾಂಕ: 13.11.2020**

**ಸಹಿ/- (ಎ.ಆರ್. ಸಿದ್ದರಾಮಪ್ಪ)**
**ಪ್ರಧಾನ ವ್ಯವಸ್ಥಾಪಕರು ಮತ್ತು ಅಧಿಕೃತ ಅಧಿಕಾರಿ,**
**ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.**

# ಆರ್ಥಿಕ ವ್ಯವಸ್ಥೆ ಬಲಿಷ್ಠವಾಗಿ ಚೇತರಿಕೆ: ಸಚಿವೆ ನಿರ್ಮಲಾ



ನವದಹೆಲಿ, ನ. 12 – ಸುದೀರ್ಘ ಹಾಗೂ ಕಠಿಣ ಲಾಕ್‌ಡೌನ್ ನಂತರ ಭಾರತೀಯ ಆರ್ಥಿಕ ವ್ಯವಸ್ಥೆ ಬಲಿಷ್ಠವಾಗಿ ಚೇತರಿಸಿಕೊಳ್ಳುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಆರ್ಥಿಕ ಉತ್ತೇಜಕಗಳನ್ನು ಪ್ರಕಟಿಸಿ ಮಾತನಾಡುತ್ತಿದ್ದ ಅವರು, ಸಮಗ್ರ ಆರ್ಥಿಕ ಮಾನದಂಡಗಳು ಚೇತರಿಕೆಯತ್ತ ಸಂಕೇತ ನೀಡುತ್ತಿವೆ ಎಂದಿದ್ದಾರೆ.

ದೇಶದಲ್ಲಿ ಸಕ್ರಿಯ ಕೊರೊನಾ ಸೋಂಕುಗಳ ಪ್ರಕರಣಗಳು 4.89 ಲಕ್ಷಕ್ಕೆ ಇಳಿಕೆಯಾಗಿವೆ. ಸೋಂಕಿನಿಂದ ಉಂಟಾಗುವ ಸಾವುಗಳ ಪ್ರಮಾಣ ಶೇ.1.47ಕ್ಕೆ ಇಳಿಕೆಯಾಗಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಖರೀದಿ ಸೂಚ್ಯಂಕ ಶೇ.54.6ರಷ್ಟಿತ್ತು. ಅಕ್ಟೋಬರ್‌ನಲ್ಲಿ ಶೇ.58.9ಕ್ಕೆ ಹೆಚ್ಚಾಗಿದೆ. ಕಳೆದ ಒಂಭತ್ತು ವರ್ಷಗಳಲ್ಲೇ ಇದು ಅತಿ ಹೆಚ್ಚಿನ ಏರಿಕೆಯಾಗಿದೆ ಎಂದು ಸಚಿವೆ ತಿಳಿಸಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಅಕ್ಟೋಬರ್‌ನಲ್ಲಿ ವಿದ್ಯುತ್ ಬಳಕೆ ಶೇ.12ರಷ್ಟು ಹೆಚ್ಚಾಗಿದೆ. ಜಿ.ಎಸ್.ಟಿ. ಸಂಗ್ರಹ ಶೇ.10ರಷ್ಟು ಹೆಚ್ಚಾಗಿ 1.05 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ ಎಂದವರು ಹೇಳಿದ್ದಾರೆ.

ದೈನಂದಿನ ರೈಲ್ವೆ ಸರಕು ಸಾಗಣೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.20ರಷ್ಟು ಹೆಚ್ಚಾ ಗಿದೆ. ಬ್ಯಾಂಕುಗಳ ಸಾಲದ ಪ್ರಮಾಣ ಶೇ.5.1 ರಷ್ಟು ಏರಿಕೆಯಾಗಿದೆ ಎಂದೂ ಅವರು ಹೇಳಿದ್ದಾರೆ.

ಏಪ್ರಿಲ್ - ಆಗಸ್ಟ್ ತಿಂಗಳಲ್ಲಿ ವಿದೇಶಿ ನೇರ ಹೂಡಿಕೆ 35.37 ಶತಕೋಟಿ ಡಾಲರ್ ಆಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.13ರಷ್ಟು ಹೆಚ್ಚಾಗಿದೆ.

2020-21ರ ಮೂರನೇ ಚತುರ್ಥದಲ್ಲಿ ಭಾರತೀಯ ಆರ್ಥಿಕ ವ್ಯವಸ್ಥೆಯ ಬೆಳವಣಿಗೆ ಧನಾತ್ಮಕ ಹಂತಕ್ಕೆ ಬರುವ ಸೂಚನೆ ಇದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

ಬಾಕಿ ಇರುವ ಬೇಡಿಕೆಯ ಜೊತೆಗೆ ಬಲಿಷ್ಠ ಆರ್ಥಿಕ ಬೆಳವಣಿಗೆಯೂ ಇದಕ್ಕೆ ಕಾರಣವಾಗಲಿದೆ ಎಂದವರು ತಿಳಿಸಿದ್ದಾರೆ.

# ರಾಜ್ಯಕ್ಕೆ ಸಿಗಲಿದೆ 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳು

ಬೆಂಗಳೂರು, ನ.12- ಪ್ರಾಥಮಿಕ ಆರೋಗ್ಯ ಕೇಂದ್ರಗಳು 24 ಗಂಟೆಯೂ ಕಾರ್ಯನಿರ್ವಹಿಸುವಂತೆ ಮಾಡುವ ಜೊತೆಗೆ ವಿಶ್ವಬ್ಯಾಂಕ್ ನೆರವಿನೊಂದಿಗೆ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಲಾಗುವುದು. ಇದಕ್ಕೆ ಪೂರಕವಾಗಿ ನೀತಿ, ನಿಯಮಗಳಲ್ಲಿ ಬದಲಾವಣೆ ತರಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ತಿಳಿಸಿದರು.

ವಿಧಾನಸೌಧದಲ್ಲಿ ಮಾಜಿ ಆರೋಗ್ಯ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು ಹಾಗೂ ವೈದ್ಯ ಶಾಸಕರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ರಾಜ್ಯದಲ್ಲಿ 2,300 ಕ್ಕೂ ಅಧಿಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. 30 ಸಾವಿರ ಜನರಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕೆಂಬ ನಿಯಮವಿದೆ. ಆದರೆ ಕೆಲ ಜಿಲ್ಲೆಗಳಲ್ಲಿ ಈ ನಿಯಮದಂತೆ ಆಸ್ಪತ್ರೆ ಇಲ್ಲ. ವಿಶ್ವಬ್ಯಾಂಕ್ ಸಹಕಾರದಿಂದ ಮೂರು ವರ್ಷಗಳಲ್ಲಿ ಪಿಎಚ್ ಸಿಗಳನ್ನು ನಿರ್ಮಿಸಲಾಗುವುದು. ಜೊತೆಗೆ ಈಗ ಇರುವ ಪಿಎಚ್ ಸಿಗಳನ್ನು 24x7 ಸೇವೆ ನೀಡುವ ಕೇಂದ್ರಗಳಾಗಿ ಪರಿವರ್ತಿಸಲಾಗುವುದು ಎಂದು ತಿಳಿಸಿದರು.



ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಆರಂಭವಾಗಿ ದೊಡ್ಡ ಆಸ್ಪತ್ರೆಗಳವರೆಗೂ ಗುಣಮಟ್ಟದಲ್ಲಿ ರಾಜಿಯಾಗದಂತೆ ಕ್ರಮ ಕೈಗೊಳ್ಳಬೇಕಿದೆ. ಇದಕ್ಕಾಗಿ ಸಮಗ್ರವಾದ ಹೊಸ ನೀತಿಯನ್ನು ರೂಪಿಸಲಾಗುತ್ತಿದೆ. ಕೆಲ ವೈದ್ಯರು ಗ್ರಾಮೀಣ ಪ್ರದೇಶಗಳಿಗೆ ಹೋಗಿ ಸೇವೆ ಸಲ್ಲಿಸಲು ಹಿಂದೇಟು ಹಾಕುತ್ತಾರೆ. ಆರೋಗ್ಯ ಸಿಬ್ಬಂದಿ ಸೇವೆ ಸಲ್ಲಿಸುವ ಪ್ರದೇಶದ ಆಧಾರದಲ್ಲಿ ಬಡ್ತಿ, ವೇತನ, ಮಕ್ಕಳಿಗೆ ಶಿಕ್ಷಣ ನೀಡುವ ಅಂಶಗಳನ್ನು ಈ ಹೊಸ ನೀತಿಯಲ್ಲಿ ಸೇರಿಸಲಾಗುವುದು ಎಂದು ವಿವರಿಸಿದರು.

1,250 ಎಂಬಿಬಿಎಸ್ ವೈದ್ಯರು, 950 ತಜ್ಞರು, 150 ದಂತ ವೈದ್ಯರು ಸೇರಿ 2,500 ವೈದ್ಯರ ನೇಮಕ ಪ್ರಕ್ರಿಯೆ ಆರಂಭವಾಗಿದೆ. ಜೊತೆಗೆ 1,500 ಹಿರಿಯ ರೆಸಿಡೆಂಟ್ ವೈದ್ಯರನ್ನು ನೇಮಿಸಲಾಗುವುದು. ಡಿಸೆಂಬರ್ ಅಥವಾ ಜನವರಿ ವೇಳೆಗೆ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಜಿಲ್ಲಾಸ್ಪತ್ರೆಗಳಲ್ಲಿ ಹುದ್ದೆಗಳು ಭರ್ತಿಯಾಗಲಿದೆ. ಅರೆ ವೈದ್ಯಕೀಯ, ನರ್ಸಿಂಗ್ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಇದನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಗಮನಕ್ಕೆ ತರಲಾಗುವುದು ಎಂದರು.

ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ನಿರ್ಮಿಸುವ ಉದ್ದೇಶವಿದ್ದು, ಅದಕ್ಕೆ ತಕ್ಕಂತೆ ನೀತಿಯಲ್ಲಿ ಬದಲಾವಣೆ ತರಲಾಗುವುದು ಎಂದರು.

# ವಿ.ವಿ. ಪಠ್ಯದಲ್ಲಿ ನಕ್ಸಲರ ಪುಸ್ತಕ ಮುಂದುವರಿಸಿ : ಡಿಎಂಕೆ, ಸಿಪಿಐ(ಎಂ)

ಚೆನ್ನೈ, ನ. 12 – ತಮಿಳುನಾಡಿನ ಸರ್ಕಾರಿ ವಿಶ್ವವಿದ್ಯಾನಿಲಯದಲ್ಲಿ ನಕ್ಸಲರ ಕುರಿತಾದ ಪುಸ್ತಕವನ್ನು ಪಠ್ಯವಾಗಿ ಮುಂದುವರೆಸಬೇಕೆಂದು ಡಿಎಂಕೆ, ಸಿಪಿಐ (ಎಂ)ಗಳು ಒತ್ತಾಯಿಸಿವೆ.

ಮನೋನ್ಮಣಿಯನ್ ಸುಂದರನ್ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಸ್ನಾತಕೋತ್ತರದ ಮೂರನೇ ಸೆಮಿಸ್ಟರ್‌ನಲ್ಲಿ ಕಳೆದ ಮೂರು ವರ್ಷಗಳಿಂದ ಅರುಂಧತಿ ರಾಯ್ ಅವರ 'ವಾಕಿಂಗ್ ವಿತ್ ದಿ ಕಾಮ್ರೆಡ್ಸ್' ಪುಸ್ತಕವನ್ನು ಕಲಿಸಲಾಗುತ್ತಿತ್ತು.

ಈ ಪುಸ್ತಕದಲ್ಲಿ ನಕ್ಸಲರು ಛತ್ತೀಸ್‌ಘಡದಲ್ಲಿ ಹೊಂದಿದ್ದ ಅಡಗುತಾಣಗಳು ಹಾಗೂ ಕಾಡುಗಳಲ್ಲಿ ಅವರ ಕಾರ್ಯ ನಿರ್ವಹಣೆಯ ರೀತಿಯನ್ನು ವಿವರಿಸಲಾಗಿತ್ತು.

ಈ ಪುಸ್ತಕದಲ್ಲಿ ನಕ್ಸಲರನ್ನು ವೈಭವೀಕರಿಸಲಾಗಿದೆ ಹಾಗೂ ಇದರಲ್ಲಿ ರಾಷ್ಟ್ರವಿರೋಧಿ ಅಂಶಗಳಿವೆ ಎಂದು ಎ.ಬಿ.ವಿ.ಪಿ. ಸೇರಿದಂತೆ ಹಲವು ಸಂಸ್ಥೆಗಳು ದೂರಿದ್ದವು. ಆನಂತರ ವಿಶ್ವವಿದ್ಯಾನಿಲಯವು ಸಮಿತಿಯೊಂದನ್ನು ರಚಿಸಿ, ಅದರ ವರದಿಯಂತೆ ಪುಸ್ತಕವನ್ನು ಪಠ್ಯದಿಂದ ತೆಗೆದು ಹಾಕಿತ್ತು.

ವಿದ್ಯಾರ್ಥಿಗಳು ಯಾವುದನ್ನು ಕಲಿಯಬೇಕು ಎಂಬುದನ್ನು ಅಧಿಕಾರದಲ್ಲಿರುವವರು ಹಾಗೂ ರಾಜಕಾರಣಿಗಳು ನಿರ್ಧರಿಸಿದರೆ ಕಲೆ ಹಾಗೂ ಸಾಹಿತ್ಯ ಉಳಿಯುವುದಿಲ್ಲ, ಬಹುತ್ವ ನಾಶವಾಗುತ್ತದೆ ಎಂದು ಡಿಎಂಕೆ ಸಂಸದೆ ಕನಿಮೋಳಿ ಹೇಳಿದ್ದಾರೆ.

ಪುಸ್ತಕ ರದ್ದುಗೊಳಿಸಿರುವುದನ್ನು ಸಿಪಿಐ (ಎಂ) ಲೋಕಸಭಾ ಸದಸ್ಯ ಎಸ್. ವೆಂಕಟೇಶನ್ ಖಂಡಿಸಿದ್ದು, ಪುಸ್ತಕವನ್ನು ಮತ್ತೆ ಪಠ್ಯದಲ್ಲಿ ಸೇರ್ಪಡೆ ಮಾಡಬೇಕೆಂದು ಆಗ್ರಹಿಸಿದ್ದಾರೆ.

ತಮಿಳುನಾಡು ಪ್ರೋಗ್ರೋಸಿವ್ ರೈಟರ್ಸ್ ಅಂಡ್ ಆರ್ಟಿಸ್ಟ್ಸ್ ಅಸೋಸಿಯೇಷನ್ ಪದಾಧಿಕಾರಿ ಆಧವನ್ ಧೀತಾಚನ್ಯ ಸಹ ನಕ್ಸಲ್ ಪುಸ್ತಕವನ್ನು ಪಠ್ಯದಿಂದ ತೆಗೆದು ಹಾಕಿರುವುದನ್ನು ವಿರೋಧಿಸಿದ್ದಾರೆ.

# ಎರಡನೇ ಹಂತದ ನಗರಗಳಲ್ಲಿ ಐಟಿ ಬೆಳವಣಿಗೆಗೆ ಹೊಸ ನೀತಿ

ಬೆಂಗಳೂರು, ನ. 12 - ರಾಜಧಾನಿ ಬೆಂಗಳೂರು ನಗರವನ್ನು ಹೊರತು ಪಡಿಸಿ, ಎರಡನೇ ಹಂತದ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನು ಶಕ್ತಿಶಾಲಿಯಾಗಿ ವಿಸ್ತರಿಸುವ ನಿಟ್ಟಿನಲ್ಲಿ ಸರಕಾರ ಹೆಜ್ಜೆ ಇಟ್ಟಿದ್ದು, ಅದಕ್ಕೆ ಪೂರಕವಾದ ಹೊಸ ಐಟಿ ನೀತಿಯನ್ನು (2020-25) ಬಿಡುಗಡೆ ಮಾಡಿದೆ.

ಬೆಂಗಳೂರಿನಲ್ಲಿ ಗುರುವಾರ ಬೆಂಗಳೂರು ಟೆಕ್ ಸಮ್ಮಿಟ್‌ಗೆ ಪೂರ್ವ ಭಾವಿಯಾಗಿ ಐಟಿ ಕ್ಷೇತ್ರ ಅಭಿವೃದ್ಧಿಗೆ ಬೆಂಗಳೂರನ್ನು ಹೊರತುಪಡಿಸಿ, ಎರಡನೇ ಹಂತದ ನಗರಗಳನ್ನು ಅಭಿವೃದ್ಧಿಪಡಿಸುವ ಉಪಕ್ರಮಗಳ ಬಗ್ಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಐಟಿ-ಬಿಟಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ 2020-2025ರ ನೂತನ ಐಟಿ ನೀತಿ ಬಿಡುಗಡೆ ಮಾಡಿದರು.

ರಾಜ್ಯ ವಿವಿಧ ನಗರಗಳಲ್ಲಿ ಐ.ಟಿ. ಕಂಪನಿಗಳ ಸ್ಥಾಪನೆ, ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು, ಮಾನವ ಸಂಪನ್ಮೂಲ ಹಾಗೂ ಉದ್ಯೋಗ ಸೃಷ್ಟಿ ಸೇರಿದಂತೆ ಹಲವಾರು ಅಂಶಗಳನ್ನು ಐ.ಟಿ. ನೀತಿ ಒಳಗೊಂಡಿದ್ದು, ಇದರಿಂದ ನಮ್ಮ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ಇನ್ನಷ್ಟು ಅಭಿವೃದ್ಧಿ ಹೊಂದಲಿದೆ ಎಂದು ಹೇಳಿದರು.

ಈಗಾಗಲೇ ಎರಡನೇ ಹಂತದ ನಗರಗಳಲ್ಲಿ ಐಟಿ ಕ್ಷೇತ್ರದ ಅಭಿವೃದ್ಧಿಗೆ ಅನೇಕ ಪ್ರಯತ್ನಗಳು ನಡೆದಿವೆ. ಮುಖ್ಯವಾಗಿ ಇನ್ಫೋಸಿಸ್ ಕಂಪನಿ ಮೈಸೂರು, ಹುಬ್ಬಳ್ಳಿ ಮತ್ತು ಮಂಗಳೂರು ನಗರಗಳಿಗೆ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುವ ದೊಡ್ಡ ಪ್ರಯತ್ನ ಮಾಡಿತು. ಇದೇ ರೀತಿಯ ಪ್ರಯತ್ನಗಳು ಮುಂದಿನ ದಿನಗಳಲ್ಲಿ ರಚನಾತ್ಮಕ ವೇಗ ಪಡೆಯಲಿವೆ ಎಂದರು.

ಸದ್ಯಕ್ಕೆ 5ಜಿ ಹೊಸ್ತಿಲಲ್ಲಿ ಇದ್ದೇವೆ. ಆದರೆ 4ಜಿ ಯನ್ನೇ ರಾಜ್ಯದ ಮೂಲೆ ಮೂಲೆಗೂ ತಲುಪಿಸುವ ಪ್ರಯತ್ನ ಇನ್ನೂ ಆಗಬೇಕಿದೆ. ಕನೆಕ್ಟಿವಿಟಿ ಎನ್ನುವುದು ಬಹಳ ಮುಖ್ಯ. ಆ ನಿಟ್ಟಿನಲ್ಲಿ ಟೆಲಿಕಾಂ ಸೇವೆಗಳ ಪರಧಿಯನ್ನು ವಿಸ್ತರಿಸಬೇಕು. ಈಗಷ್ಟೇ ರಾಷ್ಟ್ರೀಯ ಶಿಕ್ಷಣ ನೀತಿಯೂ ಜಾರಿಗೆ ಬರುತ್ತಿರುವುದರಿಂದ ನೆಟ್‌ವರ್ಕಿಂಗ್ ಅತ್ಯಗತ್ಯವಾಗಿದೆ ಎಂದು ಡಾ. ಅಶ್ವತ್ಥನಾರಾಯಣ ಹೇಳಿದರು.

ಈಗ ಬಿಯಾಂಡ್ ಬೆಂಗಳೂರು ಉಪಕ್ರಮದಿಂದ ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ ಮತ್ತು ಶಿವಮೊಗ್ಗ ನಗರಗಳತ್ತ ಟೆಲಿಕಾಂ, ಎಲೆಕ್ಟ್ರಾನಿಕ್ ಸಿಸ್ಟಮ್ ವಿನ್ಯಾಸ ಹಾಗೂ ಅಭಿವೃದ್ಧಿ (ಇಎಸ್‌ಡಿಎಂ) ಹಾಗೂ ಐಟಿ ಕಂಪನಿಗಳನ್ನು ಕಳಿಸಿ ಇಡೀ ರಾಜ್ಯದಲ್ಲಿ ಎಲ್ಲೆಡೆ ಇಂಥ ಸಂಸ್ಥೆಗಳ ಅಸ್ತಿತ್ವ ಇರುವಂತೆ ನೋಡಿಕೊಳ್ಳಲು ಸರಕಾರ ಬಲವಾಗಿ ಯತ್ನಿಸುತ್ತಿದೆ ಎಂದು ಉಪ ಮುಖ್ಯಮಂತ್ರಿ ಹೇಳಿದ್ದಾರೆ.

# ಹೊಲದಲ್ಲಿ ಕಾಣೆಯಾಗಿದ್ದ ಬಾಲಕಿ ಕಾಡಿನಲ್ಲಿ ಪತ್ತೆ

ಮಲೇಬೆನ್ನೂರು, ನ.12- ಕೊಮಾರನಹಳ್ಳಿ ಸಮೀಪದ ಗುಡ್ಡಗಾಡು ಪ್ರದೇಶದಲ್ಲಿರುವ ಮೆಕ್ಕೆಜೋಳದ ಹೊಲದಿಂದ ಮಂಗಳವಾರ ಸಂಜೆ ಕಾಣೆಯಾಗಿದ್ದ 6 ವರ್ಷದ ಜೊಯಾ ಎಂಬ ಬಾಲಕಿ ಬುಧವಾರ ಪತ್ತೆಯಾಗಿದ್ದು, ಪ್ರಕರಣ ಸುಖಾಂತ್ಯ ಕಂಡಿದೆ.

ಮನೆಯವರೆಲ್ಲಾ ಮೆಕ್ಕೆಜೋಳದ ತೆನೆ ಮುರಿಯುವುದರಲ್ಲಿ ನಿರತರಾಗಿದ್ದಾಗ ಬಾಲಕಿ ನಾಪತ್ತೆಯಾಗಿದ್ದಳು. ನಂತರ ಅವಳನ್ನು ರಾತ್ರಿಯಿಡೀ ಹುಡುಕಿದರೂ ಸಿಕ್ಕಿರಲಿಲ್ಲ.

300 ಕ್ಕೂ ಹೆಚ್ಚು ಜನ ಬಾಲಕಿಯ ಹುಡುಕಾಟದಲ್ಲಿದ್ದರು. ಬಾಲಕಿಯ ಅಳುವಿನ ಸದ್ದು ಅರಣ್ಯ ಇಲಾಖೆ ನೌಕರ ಮುನ್ನಾ ಎಂಬುವವರಿಗೆ ಕೇಳಿಸಿದಾಗ ಅವಳ ಪತ್ತೆಯಾಯಿತು. ನಂತರ ಬಾಲಕಿಗೆ ನೀರು ಕುಡಿಸಿ, ಸಮಾಧಾನ ಮಾಡಿ ಪೋಷಕರಿಗೆ ಒಪ್ಪಿಸಿದ್ದಾರೆ.

ಕಾಡಿನಲ್ಲೇ 24 ಗಂಟೆ ಕಳೆದಿರುವ ಬಾಲಕಿ ಸದ್ಯ ಯಾವುದೇ ಪ್ರಾಣಿಗಳ ಕೈಗೆ ಸಿಗದೇ ಸುರಕ್ಷಿತವಾಗಿ ಪತ್ತೆಯಾಗಿರುವುದಕ್ಕೆ ಕುಟುಂಬದ ಸದಸ್ಯರು, ಸಂಬಂಧಿಕರು, ನಾಗರಿಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

# ಕ್ರಿಕೆಟ್ : ರಾಯಲ್ ಪ್ರಥಮ, ಡ್ಯಾನ್ಸ್ ಸೋಲೋ ದ್ವಿತೀಯ



## ಸ್ಟೇಟ್ ಪಾರ್ಕ್ ಫಿಟ್ನೆಸ್ ವತಿಯಿಂದ ಪಂದ್ಯಾವಳಿ

ದಾವಣಗೆರೆ, ನ. 12- ಇಲ್ಲಿನ ಪಿ.ಜೆ. ಬಡಾವಣೆಯ ಸ್ಟೇಟ್ ಪಾರ್ಕ್ ಫಿಟ್ನೆಸ್ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಸ್ಟೇಟ್ ಪಾರ್ಕ್‌ನ ಸದಸ್ಯರುಗಳಿಗೆ ಹಮ್ಮಿಕೊಂಡಿದ್ದ ಕ್ರಿಕೆಟ್ ಪಂದ್ಯಾವಳಿಗೆ ತೆರೆಬಿದ್ದಿದ್ದು, ರಾಯಲ್ ತಂಡ ಪ್ರಥಮ ಪ್ರಶಸ್ತಿ ಪಡೆದರೆ, ಡ್ಯಾನ್ಸ್ ಸೋಲೋ ತಂಡ ದ್ವಿತೀಯ ಸ್ಥಾನ ಪಡೆದಿದೆ.

ರಾಯಲ್ ತಂಡವನ್ನು ನಾಯಕ ರೂಪಿತ್ ನಾಗರಾಜ್ ಮುನ್ನಡೆಸಿದ್ದರೆ, ಡ್ಯಾನ್ಸ್ ಸೋಲೋ ತಂಡವನ್ನು ವಿಶು ಮಾಸ್ಟರ್ ಮುನ್ನಡೆಸಿದ್ದರು.

ವಿಜೇತ ತಂಡಗಳಿಗೆ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಮಾಜಿ ಮೇಯರ್ ಶ್ರೀಮತಿ ರೇಖಾ ನಾಗರಾಜ್, ತರಬೇತುದಾರ ಅರುಣ ಬಹುಮಾನ ವಿತರಿಸಿದರು.

# ಹಾಡಹಗಲೇ ಮನೆಗೆ ಕನ್ನ

**ಲಕ್ಷಕ್ಕೂ ಅಧಿಕ ನಗದು-ಚಿನ್ನಾಭರಣ ಕಳವು**

ದಾವಣಗೆರೆ, ನ.12- ಒಂದು ಗಂಟೆಯ ಒಳಗಾಗಿ ಮನೆಗೆ ಕನ್ನ ಹಾಕಿ ನಗದು ಮತ್ತು ಚಿನ್ನಾಭರಣ ಸೇರಿ ಒಟ್ಟು ಒಂದು ಲಕ್ಷದ ಏಳು ಸಾವಿರದಷ್ಟು ಕಳವು ಮಾಡಿರುವ ಘಟನೆ ಇಲ್ಲಿನ ಆಜಾದ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದು ಹಾಡಹಗಲೇ ನಡೆದಿದೆ.

ಕೆ.ಆರ್. ರಸ್ತೆ ದೊಗ್ಗಳ್ಳಿ ಕಾಂಪೌಂಡ್‌ನಲ್ಲಿ ಬಾಡಿಗೆ ಮನೆ ಯಲ್ಲಿ ವಾಸವಿದ್ದ ಪ್ಲಂಬರ್ ಕೆಲಸಗಾರ ಶಿವಾನಂದ ಎಂಬಾತ ಬೆಳಿಗ್ಗೆ 10.30ಕ್ಕೆ ಮನೆಯ ಮುಂಭಾಗದ ಬಾಗಿಲ ಬೀಗ ಹಾಕಿಕೊಂಡು ಬಿ.ಟಿ. ಲೇಔಟ್‌ನಲ್ಲಿರುವ ಅತ್ತೆ ಮನೆಗೆ ತಿಂಡಿ ಕೊಡಲು ಕುಟುಂಬ ಸಮೇತ ಹೋಗಿದ್ದರು. ವಾಪಸ್ 11.30ಕ್ಕೆ ಮನೆಗೆ ಬರುವಷ್ಟರೊಳಗಾಗಿ ಮನೆಯ ಹಿಂಭಾಗದ ಕಿಟಕಿಯನ್ನು ಮುರಿದು ಒಳಗೆ ಪ್ರವೇಶಿಸಿರುವ ಕಳ್ಳರು 20 ಸಾವಿರ ನಗದು ಹಾಗೂ 87 ಸಾವಿರ ಮೌಲ್ಯದ 20 ಗ್ರಾಂ ಬಂಗಾರದ ಆಭರಣಗಳನ್ನು ದೋಚಿ ಪರಾರಿಯಾಗಿದ್ದಾರೆ.

# ಅಘೋಷಿತ ಬಂಗಾರ ಹೊಂದಿದ್ದ ಕ್ರಿಕೆಟಿಗ ವಶಕ್ಕೆ

ಮುಂಬೈ, ನ. 12 – ಬಂಗಾರ ಹಾಗೂ ಇತರೆ ಅಮೂಲ್ಯ ವಸ್ತುಗಳನ್ನು ತಿಳಿಸದೇ ತಂದ ಕಾರಣಕ್ಕಾಗಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕ್ರಿಕೆಟಿಗ ಕೃನಾಲ್ ಪಾಂಡ್ಯ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ಯು.ಎ.ಇ.ಯಿಂದ ಬಂದಿದ್ದ ಕೃನಾಲ್ ಅವರನ್ನು ಕಂದಾಯ ಗುಪ್ತಚರ ಅಧಿಕಾರಿಗಳು ಸಂಜೆ 5 ಗಂಟೆಗೆ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಐ.ಪಿ.ಎಲ್. ಗೆದ್ದ ಮುಂಬೈ ಇಂಡಿಯನ್ಸ್ ತಂಡದಲ್ಲಿ ಕೃನಾಲ್ ಇದ್ದರು.

# ಅನಾರೋಗ್ಯದಿಂದ ಖೈದಿಯ ಸಾವು

ದಾವಣಗೆರೆ, ನ.12- ಅನಾರೋಗ್ಯ ಕಾರಣದಿಂದ ಇಲ್ಲಿನ ಜಿಲ್ಲಾ ಕಾರಾಗೃಹದ ವಿಚಾರಣಾಧೀನ ಖೈದಿಯೋರ್ವ ಮೃತಪಟ್ಟಿದ್ದಾನೆ.

ತಿಪಟೂರು ತಾಲ್ಲೂಕಿನ ಬೇಸಿಗೆ ರಾಮಚಂದ್ರಾಪುರದ ದೇವರಾಜ (49) ಮೃತನು. ಈತ ಕೆಟಿಜೆ ನಗರದಲ್ಲಿನ ಕಳ್ಳತನ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿದ್ದ.

ಉಸಿರಾಟ ಸಮಸ್ಯೆ, ಅಸ್ತಮಾ, ರಕ್ತದೊತ್ತಡ, ಮಧುಮೇಹದಿಂದ ಬಳಲುತ್ತಿದ್ದ ಈತನನ್ನು ಚಿಕಿತ್ಸೆಗಾಗಿ ಬುಧವಾರ ಸಂಜೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಕಾರಾಗೃಹದ ಅಧೀಕ್ಷಕ ಕರ್ಣ ಬಿ. ಕ್ಷತ್ರಿ ತಿಳಿಸಿದ್ದಾರೆ.


## ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ವಿನಾಯಕ ಪ್ಲಾಜಾ, ವಿಜಯಲಕ್ಷ್ಮೀ ರಸ್ತೆ, ದಾವಣಗೆರೆ-577 001.

### ಮಾನ್ಯ ಸದಸ್ಯರುಗಳ ಗಮನಕ್ಕೆ

ಕೋವಿಡ್-19 ವೈರಸ್ ಮಹಾಮಾರಿ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಹೆಚ್ಚಿಗೆ ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಪ್ರಯುಕ್ತ ಬ್ಯಾಂಕಿನ 2019-20ನೇ ಸಾಲಿನ 22 ನೇ ವಾರ್ಷಿಕ ಮಹಾಸಭೆಯನ್ನು ಮುಂದೂಡಲಾಗಿತ್ತು. ಆ ಸಭೆಯನ್ನು 5.12.2020 ರಂದು ಬೆಳಿಗ್ಗೆ 11 ಗಂಟೆಗೆ ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ. ಇಲ್ಲಿ ನಡೆಸಲು ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಮಾನ್ಯ ಸದಸ್ಯರುಗಳು ಯಾವುದೇ ವಿಷಯದ ಬಗ್ಗೆ ತಾವು ನೀಡಲುದ್ದೇಶಿಸಿರುವ ಸಲಹೆ, ಸೂಚನೆ, ಮಾರ್ಗದರ್ಶನವನ್ನು ಸಭೆ ನಡೆಯುವ 3 ದಿನದ ಮುಂಚಿತವಾಗಿ ಲಿಖಿತ ಪತ್ರದ ಮೂಲಕ ಸೊಸೈಟಿಯ ವ್ಯವಸ್ಥಾಪಕರಿಗೆ ಸಲ್ಲಿಸಬೇಕು.

ಸಹಿ/- ಪ್ರಶಾಂತ್ ವಿ. ವೆರ್ಣೇಕರ್ ಅಧ್ಯಕ್ಷರು | ಸಹಿ/- ರಾಜೀವ್ ವಿ. ವೆರ್ಣೇಕರ್ ಉಪಾಧ್ಯಕ್ಷರು | ಸಹಿ/- ಪ್ರವೀಣ್ ರಾಯ್ಕರ್ ವ್ಯವಸ್ಥಾಪಕರು/ಕಾರ್ಯದರ್ಶಿಗಳು









ಶೋರೂಮ್ : ನಂ.1, ಗ್ರೌಂಡ್ ಫ್ಲೋರ್, ತೋಶನಿ ಎಂಪೋರಿಯಾ, ಎವಿಕೆ ಕಾಲೇಜ್ ರೋಡ್, ಪಿ ಜೆ ಎಕ್ಸ್‌ಟೆನ್ಶನ್ ರೋಡ್, ದಾವಣಗೆರೆ. ದೂರವಾಣಿ: 296303, 6364795111.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte